

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ


Editor: MARUTIBASAVANTAPPAHOSAMANI

Cell : +91 9741319119

RNI REG No. : KARKAN/2016/75068

Volume : 07 Issue : 37 Friday 11-10-2024 E-mail : maruti.b.hosamani76@gmail.com Page: 4 Price : Rs. 1/-


## ಯುವಕರ ಸ್ಫೂರ್ತಿಯ ಚಿಲುಮೆ "ರತನ್ ಟಾಟಾ"




**ಶೀರ್ಷಿಕೆ : ಯುವಕರ ಸ್ಫೂರ್ತಿಯ ಚಿಲುಮೆ ರತನ್ ಟಾಟಾ**

ಯುವಕರ ಸ್ಫೂರ್ತಿಯ ಚಿಲುಮೆ ರತನ್ ಟಾಟಾ
ಸರಳತೆಯ ಸಾಹುಕಾರ ರತನ್ ಟಾಟಾ
ಬಡವರ ಬಂಧು ಕಲಿಯುಗದ ಕರ್ಣ ರತನ್ ಟಾಟಾ
ಕೋಟ್ಯಾಂತರ ಭಾರತೀಯರಿಗೆ ರೋಲ್ ಮಾಡೆಲ್ ರತನ್ ಟಾಟಾ.

ಕಾಸಿದ್ದರೆ ಅಷ್ಟೇ ಸಿರಿವಂತರು ಅಂದುಕೊಂಡಿತ್ತು ಸಮಾಜ
ಹೃದಯ ಶ್ರೀಮಂತಿಕೆಯ ಅಸಲಿ ಅರ್ಥವನ್ನು ತೋರಿಸಿದ ಮನುಜ
ದೇಶದ ಪ್ರಮುಖ ಉದ್ಯಮಗಳಲ್ಲಿ ಪ್ರಮುಖ ದಿಗ್ಗಜ
ಪಯಣ ಮುಗಿಸಿದ ವಿಶ್ವದ ಖ್ಯಾತ ದಿಗ್ಗಜ.

ಭಾರತ ದೇಶ ಕಂಡ ಅದ್ವಿತೀಯ ಉದ್ಯಮಿ
ನವ ಉದ್ಯಮಗಳಿಗೆ ಆದರ್ಶಪ್ರಾಯರಾಗಿದ್ದ ಪ್ರಸಿದ್ಧ ಕೈಗಾರಿಕೋದ್ಯಮಿ
ದೇಶಕ್ಕೆ ಕಷ್ಟ ಅಂತ ಬಂದಾಗ ತನ್ನ ಸರ್ವಸ್ವವನ್ನು ದಾನ ಮಾಡಿದ ರಾಷ್ಟ್ರಪ್ರೇಮಿ
ದೇವರಂತ ಮನುಷ್ಯ ಭಾರತದ ಹೆಮ್ಮೆಯ ರಾಷ್ಟ್ರ ಪ್ರೇಮಿ.

ಭಾರತ ಮಾತೆಯ ಹೆಮ್ಮೆಯ ಪುತ್ರರಿವರು
ಭಾರತದ ಟಾಟಾ ಸಮೂಹದ ದೊರೆಯಿವರು
ಭಾರತದ ಅನರ್ಘ್ಯ ನಕ್ಷತ್ರಯಿವರು
ಭಾರತದ ಖ್ಯಾತ ಉದ್ಯಮಿ ಭಾರತದ ಕಣ್ಮಣಿಯಿವರು.

**–ಕು. ಜ್ಯೋತಿ ಆನಂದ ಚಂದುಕರ**
**ಬಾಗಲಕೋಟ**

# ದೇವರ ಹಿಪ್ಪರಗಿ: ಕನ್ನಡ ನಾಡು ನುಡಿಗೆ ಸಜ್ಜಾಗಿ

**ಸಿಹಿ ಕಹಿ ಸುದ್ದಿ**

**ದೇವರ ಹಿಪ್ಪರಗಿ :** 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಪಟ್ಟಣ–ಕ್ಕೆ ಆಗಮಿಸಿದ ಕನ್ನಡ ಜ್ಯೋತಿ ರಥಯಾತ್ರೆಗೆ ಅದ್ದೂರಿಯಿಂದ ಸ್ವಾಗತಿಸಿದರು ಪಟ್ಟಣದ ಅಂಬೇಡ್ಕರ್ ವೃತ್ತಕ್ಕೆ ಬುಧವಾರ ಸಂಜೆ ಆಗಮಿಸಿದ ಕನ್ನಡ ಜ್ಯೋತಿ ರಥಯಾತ್ರೆಗೆ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತಿ ಹಾಗೂ ಪಟ್ಟಣ ಪಂಚಾಯತಿ, ಕನ್ನಡ ಸಾಹಿತ್ಯ ಪರಿಷತ್ತ ಜಯ ಕರ್ನಾಟಕ ದಲಿತ ಸಂಘಟನೆ, ಕರ್ನಾಟಕ ರಕ್ಷಣೆ ವೇದಿಕೆ,
ಶರಣ ಸಾಹಿತ್ಯ ಪರಿಷತ್ತ ಶಿಕ್ಷಕರು ಸಂಘ ಹಾಗೂ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ರಥಯಾತ್ರೆಯನ್ನ ಸ್ವಾಗತಿಸಿ ಭುವನೇಶ್ವರಿ ಪ್ರತಿಮೆಗೆ ಪೂಜೆ ಸಲ್ಲಿಸಿದ್ದರು, ಕನ್ನಡ ಸಾಹಿತ್ಯ ಪರಿಷತ್ತ ಜಿಲ್ಲಾ ಧ್ಯಕ್ಷರಾದ ಹಾಸಿಂಪೀರ ವಾಲಿಕಾರ ಮಾತನಾಡಿ ಕನ್ನಡ ನೆಲ ಜಲ ನಾಡು ನುಡಿ ಭಾಷೆ ಜಾಗೃತಿಗಾಗಿ



ಹಾಗೂ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜನರಲ್ಲಿ ಕನ್ನಡ ಅಭಿಮಾನಿ ವನ್ನು ಮೂಡಿಸುವ ಅಂಗವಾಗಿ ರಾಜ್ಯದ್ಯಂತ ಕನ್ನಡ ಜ್ಯೋತಿ ರಥಯಾತ್ರೆ ಸಂಚರಿಸುತ್ತದೆ ಎಂದು ಹೇಳಿದರು, ತಾಲ್ಲೂಕು ತಹಶಿಲ್ದಾರರಾದ ಪ್ರಕಾಶ ಸಿಂದಗಿ, ಅನುಗ್ರಹ ಕಣ್ಣಿನ ಆಸ್ಪತ್ರೆಯ ನೇತ್ರತಜ್ಞರಾದ ಪ್ರಭುಗೌಡ ಲಿಂಗದಳ್ಳಿ, ಚಬನೂರ,ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷರಾದ ಜಿ ಬಿ ಬಿರಾದಾರ, ಸಿಂದಗಿ ತಾಲ್ಲೂಕಿನ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಅಶೋಕ ತೆಲ್ಲೂರ ಮಾತನಾಡಿದ್ದರು, ಕನ್ನಡ ರಥ ಮೊಹರೆ ಹಣಮಂತ್ರಾಯ ವೃತ್ತ ದವರಿಗೆ ಮೆರವಣಿಗೆ ಮೂಲಕ ಬಿಳ್ಕೋಡಲಾಯಿತು,ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕರಾದ ಭಾರತಿ ಚೆಲವಯ್ಯ,ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಗಳಾದ ಎನ್ ಎಸ್ ಬಾಗಲಕೋಟ, ಸಿಂದಗಿ ತಾಲ್ಲೂಕ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ ಬಿ ಯಡ್ರಾಮಿ, ನಿವೃತ್ತಿ ನೌಕರರ ಸಂಘದ ಅಧ್ಯಕ್ಷರಾದ ಸಿ ಕೆ ಕುದರಿ ತಾಲ್ಲೂಕು ಶಿಕ್ಷಕರು ಸಂಘದ ಅಧ್ಯಕ್ಷರಾದ ಎ ಎಚ್ ವಾಲಿಕಾರ ಪಿ ಜಿ ಹಿರೇಮಠ, ಎಸ್ ಎಸ್ ಸಾತಿಹಾಳ ಸಂಗಪ್ಪ ತಡವಲ್ ಸಂಗನಗೌಡ ಬಿರಾದಾರ, ರೆಹಮಾನ್ ಕಣಿಕಾಲ ರಾಘ ಗುಡಿಮನಿ ಸಿದ್ದು ಮೇಲಿನಮನಿ ಮುರ್ತುಜಾ ತಾಂಬೊಳಿ ಶಿವರಾಜ್ ತಳವಾರ, ಸೇರಿದಂತೆ ವಿವಿಧ ಸಂಘಟನೆಯವರು, ಕನ್ನಡ ಅಭಿಮಾನಿಗಳು, ಈ ಕಾರ್ಯಕ್ರಮ ದಲ್ಲಿ ಉಪಸ್ಥಿತರಿದ್ದರು,

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ.ಹಚ್ಯಾಳ.ದೇವರ ಹಿಪ್ಪರಗಿ**

# ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ವಿಜೇತ ಜಾಂಬ್ರೆಗೆ ಸನ್ಮಾನ

**ಸಿಹಿ ಕಹಿ ಸುದ್ದಿ**

**ಬೇವೂರ:**ಬೇವೂರಿನಶ್ರೀಪರಪ್ಪಸಂಗಪ್ಪ ಸಜ್ಜನಕಲಾಮಹಾವಿದ್ಯಾಲಯದಬಿ.ಎ. ವಿದ್ಯಾರ್ಥಿಜ್ಯೋತಿಭಾಜಾಂಬ್ರೆಇತ್ತಿಚೀಗೆ ಜರುಗಿದ ಕುಸ್ತಿ ಕ್ರೀಡಾ ಕೂಟಗಳ ಪೈಕಿ ಬಾಗಲಕೋಟೆ ಜಿಲ್ಲಾ ಮಟ್ಟದ, ಹಾಗೂ ಬೆಳಗಾವಿ ವಲಯ ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಆಯ್ಕೆಗೊಂಡು ನಾಡಿನ ಹೆಮ್ಮೆಯ ಮೈಸೂರಿನ ದಸರಾ ಪ್ರಯುಕ್ತ ಮೈಸೂರಿನಲ್ಲಿ ಜರುಗಿದ ರಾಜ್ಯ ಮಟ್ಟದ ದಸರಾ ಕ್ರೀಡಾ ಕೂಟದ ಪುರುಷರ ವಿಭಾಗದ 70 ಕೆ.ಜಿ ಕುಸ್ತಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ಗೋಲ್ಡ್ ಮೆಡಲ್ ಹಾಗೂ ಪ್ರಶಸ್ತಿ ಪತ್ರ ಪಡೆದು ಗ್ರಾಮೀಣ ವಿಭಾಗದ ಪ್ರತಿಷ್ಠಿತ ವಿದ್ಯಾ. ಸಂಸ್ಥೆಯಾದ ಆದರ್ಶ ವಿದ್ಯಾವರ್ಧಕ ಸಂಘಕ್ಕೆ ಹಾಗೂ ಶ್ರೀ ಪರಪ್ಪ ಸಂಗಪ್ಪ ಸಜ್ಜನ ಕಲಾ ಮಹಾವಿದ್ಯಾಲಯಕ್ಕೆ ಕೀರ್ತಿಯನ್ನು ತಂದಿದ್ದಾರೆ. ದಸರಾ ಕ್ರೀಡಾ ಕೂಟವನ್ನು ಯಶಸ್ವಿಯಾಗಿ ಪೂರೈಸಿ ಮಹಾವಿದ್ಯಾಲಯಕ್ಕೆ ಆಗಮಿಸಿದ ಕ್ರೀಡಾ ವಿಜೇತ ಜ್ಯೋತಿಭಾ ಜಾಂಬ್ರೆಯವರಿಗೆಸಂಸ್ಥೆಯಅಧ್ಯಕ್ಷರಾದ ಶ್ರೀಜಿ.ಜಿ.ಮಾಗನೂರವಕೀಲರುಗೌರವ ಸನ್ಮಾನವನ್ನುನೇರವೇರಿಸಿಕ್ರೀಡಾವಿಜೇತ ವಿದ್ಯಾರ್ಥಿಯಿಂದ ನಿರಂತರವಾಗಿ ಕುಸ್ತಿ ವಿಭಾಗದಲ್ಲಿ ಸಾಧನೆಗಳು ಹೊರ ಹೊಮ್ಮಲಿ ಎಂದು ಶುಭ ಹಾರೈಸಿದರು. ಈ ಸನ್ಮಾನ ಸಮಾರಂಭದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ, ಜಗದೀಶ ಗು. ಭೈರಮಟ್ಟಿ, ಹಿರಿಯ ಉಪನ್ಯಾಸಕರಾದ ಬಿ.ಬಿಬೇವೂರಹಿರಿಯಉಪನ್ಯಾಸಕರಾದ ಶ್ರೀ ಎಸ್.ಎಸ್. ಆದಾಪೂರ ಕನ್ನಡ ಉಪನ್ಯಾಸಕರಾದ ಡಾ, ಸಂಗಮೇಶ ಹಂಚಿನಾಳ,ಎನ್.ಎಸ್.ಎಸ್ ವಿಭಾಗದ ಯೋಜನಾಧಿಕಾರಿ ಶ್ರೀ ಜಿ.ಎಸ್ ಗೌಡರ ಇಂಗ್ಲೀಷ ಉಪನ್ಯಾಸಕ ಡಿ.ವಾಯ್. ಬುಡ್ಡಿಯವರ, ಇತಿಹಾಸ ಉಪನ್ಯಾಸಕ ಡಾ, ಎ.ಎಂ. ಗೊರಚಿಕ್ಕನವರ, ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕ ನಾಗಲಿಂಗೇಶ ಬೆಣ್ಣೂರ ಸೇರಿದಂತೆ ಭೋಧಕೇತರಸಿಬ್ಬಂದಿವರ್ಗದವರಾದ ಶ್ರೀ ಆರ್.ಬಿ. ಕರಡಿಗುಡ್ಡ, ಶಿವು ಕಟಗಿ ಮುಂತಾದವರು ಉಪಸ್ಥಿತರಿದ್ದರು. ವಿದ್ಯಾರ್ಥಿ ಜ್ಯೋತಿಬಾ ಜಾಂಬ್ರೆ ದಸರಾ ಕ್ರೀಡಾ ಕೂಟದಲ್ಲಿ ಆಯ್ಕೆಯಾಗಿದ್ದಕ್ಕಾಗಿ ಬೇವೂರಿನಆ.ವಿ.ವಸಂಸ್ಥೆಯಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯ ಬಳಗ ಸಿಬ್ಬಂದಿವರ್ಗ ವಿದ್ಯಾರ್ಥಿಗೆಅಭಿನಂದನೆ ಸಲ್ಲಿಸಿದ್ದಾರೆ.

**ವರದಿ : ಅಮರೇಶ ಮ . ಗೊರಚಿಕ್ಕನವರ.**



# ನವರಾತ್ರಿ ಉತ್ಸವಕ್ಕೆ ಜ್ಞಾನೇಶ್ವರ ಮಹಾಸ್ವಾಮಿಗಳು ಚಾಲನೆ



**ಹಳ್ಳೂರ :** ನವರಾತ್ರಿ ಉತ್ಸವ ನಿಮಿತ್ಯವಾಗಿ ಶ್ರೀ ದ್ಯಾಮವ್ವ ದೇವಿ ದೇವಸ್ಥಾನದಲ್ಲಿ 9 ದಿನಗಳ ಕಾಲ ಜರುಗುತ್ತಿರುವ ಶ್ರೀ ದೇವಿ ಪುರಾಣ ಕಾರ್ಯಕ್ರಮಕ್ಕೆ ಗುರುವಾರದಂದು ಸಾಯಂಕಾಲ ಸಮಯದಲ್ಲಿ ನಾಗರಾಳ ಪರಮಾನಂದ ಯೋಗಾಶ್ರಮದ ಶ್ರೀ ಜ್ಞಾನೇಶ್ವರ ಮಹಾಸ್ವಾಮಿಗಳು ಹಾಗೂ ಸಿದ್ಧಾರೂಢ ಮಠದ ಶಿವಾನಂದ ಸ್ವಾಮೀಜಿಗಳು ಚಾಲನೆ ನೀಡಿದರು. ಜ್ಞಾನೇಶ್ವರ ಮಹಾಸ್ವಾಮಿಗಳು ಮಾತನಾಡಿ ನವರಾತ್ರಿ 9 ದಿನ ದಿನಾಲು ದೇವಿಯು ಒಂದೊಂದು ಅವತಾರ ತಾಳಿ ದುಷ್ಟರ ಸಂಹಾರ ಮಾಡಿ ಸಿಸ್ಟರ್ ರಕ್ಷಣೆ ಮಾಡುವರು ದೇವಿಯನ್ನು ಭಕ್ತಿಯಿಂದ ಪೂಜಿಸಿ ದ್ಯಾಣಿಸಿದರೆ ಸಕಲ ಸೌಭಾಗ್ಯ ದೊರೆಯುತ್ತವೆ ಎಂದು ಹೇಳಿದರು.
ನವ ಶಕ್ತಿ ವೇಷ ಧರಿಸಿದ ಲಕ್ಷ್ಮೀ ತೋಟಗಿ . ಭವಾನಿ ಬಡಿಗೇರ. ಚಾರವಿ ಮಿರ್ಜಿ.ಶ್ರಾವಣಿ ನಾವಿ.ಕಾವೇರಿ . ಶ್ರೀದೇವಿ ಬಡಿಗೇರ ಮತ್ತಿತರರಿದ್ದರು.
ಈ ಸಮಯದಲ್ಲಿ ಶಾಂತಯ್ಯ ಹೀರೆಮಠ.ಬಸವನ್ನೆಪ್ಪ ಡಬ್ಬನವರ. ಶಿವಪ್ಪ ನಿಡೋಣಿ.ರಾಮಗೌಡ ಪಾಟೀಲ. ದುಂಡಪ್ಪ ಬಡಿಗೇರ. .ಸುರೇಶ ಕೌಜಲಗಿ.ಶ್ರೀಶೈಲ ಹಳ್ಳೂರ. ಲಕ್ಷ್ಮಣ ಬಡಿಗೇರ. ಸೇರಿದಂತೆ ಅನೇಕ–ರಿದ್ದರು. ಕಾರ್ಯಕ್ರಮವನ್ನು ಮುರಿಗೆಪ್ಪ ಮಾಲಗಾರ ಸ್ವಾಗತಿಸಿ,ನಿರೂಪಿಸಿದರು.

# ವಾರ್ಷಿಕ ಶಿಬಿರ ಉದ್ಘಾಟನೆ

## ಸೇವಾ ಮನೋಭಾವನೆ ಬೆಳೆಸಲು ಎನ್‌ಎಸ್‌ಎಸ್ ಸಹಾಯಕ: ಪಟ್ಟಣಶೆಟ್ಟಿ



**ಬಾದಾಮಿ :** ವಿದ್ಯಾರ್ಥಿಗಳಿರುವಾಗಲೇ ಸೇವಾ ಮನೋಭಾವನೆ ಬೆಳೆಸುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್) ಸಹಕಾರಿಯಾಗಿದೆ ಎಂದು ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಹೇಳಿದರು. ಅವರು ತಾಲೂಕಿನ ದತ್ತು ಗ್ರಾಮ ನಂದಿಕೇಶ್ವರದಲ್ಲಿ ಕೆ.ಎಂ.ಪಟ್ಟಣಶೆಟ್ಟಿ ಪ.ಪೂ.ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ 2024–25 ನೇ ಸಾಲಿನ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಸೇವಾ ಮನೋಭಾವನೆ ಮೂಲಕ ಕೆಲಸ ಮಾಡುವುದರಿಂದ ದುಡಿಮೆಯ ಅನುಭವವಾಗುತ್ತದೆ. ಕೆಲಸ ಮಾಡಿದರೆ ಗ್ರಾಮಗಳಲ್ಲಿ ಸ್ವಚ್ಛತೆ, ಕಟ್ಟಡ ನಿರ್ಮಾಣ, ಸೇರಿದಂತೆ ಅನೇಕಕೆಲಸಮಾಡಬಹುದಾಗಿದೆಎಂದುಹೇಳಿದರು.
ವೇದಿಕೆಯಲ್ಲಿ ಶರಣಬಸವ ಶ್ರೀಗಳು ದಿವ್ಯ ಸಾನಿಧ್ಯ ವಹಿಸಿದ್ದರು. ನಂದಿಕೇಶ್ವರ ಗ್ರಾ.ಪಂ.ಅಧ್ಯಕ್ಷೆ ಗಂಗಮ್ಮ ಗೋವಣಕಿ, ಸದಸ್ಯರಾದ ಮಾನಗೌಡ ಜನಾಲಿ, ಮಲ್ಲಪ್ಪ ಗಾರವಾಡ, ಮಂಗಳಾ ಮುಚಖಂಡಿ, ಸಿದ್ದು ಮುಚಖಂಡಿ ಸೇರಿದಂತೆ ಹಿರಿಯರು, ಮುಖಂಡರು ಹಾಜರಿದ್ದರು.
ಪ್ರಾಚಾರ್ಯ ಮಂಜುನಾಥ ಪತ್ತಾರ ಪ್ರಾಸ್ಥಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಕಾರ್ಯಕ್ರಮಾಧಿಕಾರಿ ಎಸ್.ಎಸ್.ಸರಗಣಾಚಾರಿ ಕಾರ್ಯಕ್ರಮವನ್ನು ನಿರೂಪಿಸಿದರು.

# ಕಾನೂನು ಸಲಹೆಗಾರರ ಹುದ್ದೆಗೆ ಅರ್ಜಿ

**ಬಾಗಲಕೋಟೆ :** ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಕಂದಾಯ ಇಲಾಖೆಯ ಸಂಬಂಧಿಸಿದ ಭೂಕಂದಾಯ, ಭೂಮಂಜುರಾತಿ, ಭೂಸುಧಾರಣಾ, ಸ್ವಾಧೀನಕಾಯ್ದೆ, ನಿಯಮ, ಇನ್ನೀತರ ಕಾಯ್ದೆ, ನಿಯಮಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಹಾಗೂ ಯಾವುದೇ ನ್ಯಾಯಾಲಯದ ವ್ಯಾಜ್ಯಗಳ ಬಗ್ಗೆ ಕಾನೂನು ಸಲಹೆ ನೀಡಲು ಸೃಜೀಸಲಾಗಿರುವ ಕಾನೂನು ಸಲಹೆಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಿವೃತ್ತ ಸಿವಿಲ್ ನ್ಯಾಯಾಧೀಶರು, ಕಾನೂನು ಪದವೀಧರರಾಗಿರುವ ಕಂದಾಯ ಇಲಾಖೆಯ ನಿವೃತ್ತ ವಿಶೇಷ ಜಿಲ್ಲಾಧಿಕಾರಿ, ನಿವೃತ್ತ ತಹಶೀಲ್ದಾರ, ನಿವೃತ್ತ ಉಪ ತಹಶೀಲ್ದಾರ ಇವರಲ್ಲಿ ಒಬ್ಬರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು ಅಕ್ಟೋಬರ 21ರೊಳಗಾಗಿ ಜಿಲ್ಲಾಧಿಕಾ–ರಿಗಳು, ಬಾಗಲಕೋಟೆ ಕಚೇರಿಯಲ್ಲಿ ಸಲ್ಲಿಸುವಂತ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಸಿಎಂ : ವಸತಿ ನಿಲಯ ಪ್ರವೇಶಕ್ಕೆ ಅರ್ಜಿ

**ಬಾಗಲಕೋಟೆ:**ಪ್ರಸಕ್ತಸಾಲಿಗೆಹಿಂದುಳಿದವರ್ಗಗಳಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ ಮತ್ತು ಪ.ಜಾತಿ, ಪಂಗಡ ವರ್ಗದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.
ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ಪ್ರವರ್ಗ–1, ಎಸ್‌ಸಿ, ಎಸ್‌ಟಿಯರಿಗೆ 2.50 ಲಕ್ಷ ರೂ., ಪ್ರವರ್ಗ 2ಎ, 2ಬಿ, 3ಎ, 3ಬಿಗಳಿಗೆ 1 ಲಕ್ಷ ರೂ. ಮೀರಬಾರದು. ಇಲಾಖೆಯ ವೆಬ್‌ಸೈಟ್ http://shp.karnataka.gov.in/bcwdನಲ್ಲಿ ಅಕ್ಟೋಬರ 30ರೊಳಗಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವಲ್ಲಿ ತಾಂತ್ರಿಕ ತೊಂದರೆಗಳಾದಲ್ಲಿ ಇಮೇಲ್ ಛಿಛಿತಿಜ–ಀಜಟರಿಟುಟಿಜ@ರಟಬಚುಟ.ಛಿಂಟ ಮೂಲಕ ಅಥವಾ ಜಿಲ್ಲಾ, ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಚೇರಿ ಸಂಪರ್ಕಿಸುವಂತೆ ಜಿಲ್ಲಾ ಅಧಿಕಾರಿ ಎಂ.ಎಂ.ತುಂಬರಮಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುರ ಸಭೆಗೆ ಮುತ್ತಿಗೆ ಹಾಕಿ ಮುಖ್ಯಾಧಿಕಾರಿ–ವಿರುದ್ಧ ಆಕ್ರೋಶ




**ಸಿಹಿ ಕಹಿ ಸುದ್ದಿ**



**ಮಾನ್ವಿ :** ಮಾನ್ವಿಯಲ್ಲಿ ದಿನಕ್ಕೊಂದು ಸಮಸ್ಯೆ ಬಟಾ ಬಯಲಾಗುತ್ತಿದ್ದು, ಪುರಸಭೆ ಕಚೇರಿಯ ಆಡಳಿತ ಹದಗೆಟ್ಟಿದ್ದರಿಂದ 20 ನೆ. ವಾರ್ಡ್ ನಿವಾಸಿಗಳು ನಮಗೆ ನ್ಯಾಯಬೇಕು ಎಂದು ಪುರಸಭೆ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.
ಮಾನ್ವಿ ಪಟ್ಟಣದ 20 ನೆ. ವಾರ್ಡಿನ ಬಹುತೇಕ ಜನರು ಕೂಲಿ ಕಾರ್ಮಿಕರಾಗಿದ್ದು, ಆದರೆ ಈ ವಾರ್ಡ್ ನಲ್ಲಿ ಪುರಸಭೆ ಮುಖ್ಯಾಧಿಕಾರಿ ಗಂಗಾಧರಪ್ಪ ಮನೆಗೊಂದು ಶೌಚಾಲಯ ಕಟ್ಟಿಸಿ ಕೊಡದ ಕಾರಣ ಬಹಿರ್ದೆಸೆಯನ್ನು ನೆಚ್ಚುವಂತಾಗಿದೆ.
ಮಾನ್ವಿ ಜನತೆಗೆ ಬಂದ ಸ್ವಚ್ಛ ಭಾರತ ಯೋಜನೆಯ ಹಣ ಯಾರ ಪಾಲಾಗಿದೆ, ನಮಗೆ ಮನೆಗೊಂದು ಶೌಚಾಲಯ ಕಟ್ಟಿಸಿ ಕೊಡದ ಕಾರಣ ಬಹಿರ್ದೆಸೆ ಶೌಚಾಲಯ ಮಾಡುತ್ತಿದ್ದೇವೆ. ಆದರೆ ವ್ಯಕ್ತಿಯೊಬ್ಬ ಶೌಚಾಲಯ ಮಾಡಬಾರದು ಎಂದು ಅಡ್ಡಿ ಪಡಿಸಿದ್ದು, ನಮಗೆ ನ್ಯಾಯಬೇಕು ಎಂದು ಮಹಿಳೆಯರು ಒತ್ತಾಯಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

# ರಕ್ತದಾನಿ ಬಸವರಾಜ ಕೊಣ್ಣೂರವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲು ಆಗ್ರಹ

**ಬಾದಾಮಿ :** ರಕ್ತದಾನಿ ಬಸವರಾಜ ಕೊಣ್ಣೂರ ಅವರಿಗೆ ಕನ್ನಡ ರಾಜ್ಯೋತ್ಸವದ ರಾಜ್ಯ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು ಎಂದು ನಗರದ ಮುಖಂಡರು ಒಕ್ಕೋರಲಿನಿಂದ ಆಗ್ರಹಿಸಿದರು.
ಅವರು ಶುಕ್ರವಾರ ನಗರದ ಎಸ್.ವಿ.ಪಿ ವಿದ್ಯಾ ಸಂಸ್ಥೆಯಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಬಣಜಿಗ ಸಮಾಜದ ಅಧ್ಯಕ್ಷ ಡಾ.ಅವಿನಾಶ ಮಮದಾಪೂರ, ಪುರಸಭೆ ಸದಸ್ಯರಾದ ಆರ್.ಎಫ್.ಬಾಗವಾನ, ಅಶೋಕ ಜವಳಿ ಮಾತನಾಡಿ ಈಗಾಗಲೇ ರಕ್ತದಾನಿ ಬಸವರಾಜ ಕೊಣ್ಣೂರ ಅವ–ರಿಗೆ ಜಿಲ್ಲಾಡಳಿತ ಜಿಲ್ಲಾ ಪ್ರಶಸ್ತಿ ನೀಡಿದೆ. ಏಕೈಕ ಪೈಲ್ವಾನ್ ಇವರಾಗಿದ್ದು, ಬಸಣ್ಣನಂತೆ ಊರಲ್ಲಿ ಇದ್ದರೆ ಕೃತಕ ವಸ್ತು, ಶರೀರದ ಅಂಗಾಂಗ ಹಾಕಬಹುದು. ರಕ್ತ ಕೃತಕ ಎಲ್ಲಿಯೂ ಇಲ್ಲ. ಇದೊಂದು ಸಹಾಸ ಅಲ್ಲದೆ ದೈಹಿಕ ಸದೃಢವಾಗಿ ಇರಲು ಸಾಧ್ಯವಾಗುತ್ತದೆ. ಇಂತಹ ಮಹಾನ್ ದಾನಿಗೆ ರಾಜ್ಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ



ಕೊಡಬೇಕು ಎಂದು ಆಗ್ರಹಿಸಿದರು.
ಡಾ.ಆರ್.ಸಿ.ಭಂಡಾರಿ ಮಾತನಾಡಿ ಗರ್ಭಿಣಿ, ಅಪಘಾತ ಸೇರಿದಂತೆ ಸಾಕಷ್ಟು ಅವಶ್ಯಕ ವಾಗಿದೆ. ಪ್ರತಿ ಸೆಕೆಂಡ್ ಗೂ ರಕ್ತದ ಅವಶ್ಯಕತೆ ಇದೆ ಎಂಬ ಅರಿವು ಮೂಲಕ ಆದರ್ಶ ಪಾಲನೆ ಮಾಡಬೇಕು. ವೃತ್ತಿಯಲ್ಲಿ ಪ್ರವೃತ್ತಿ ಮೂಲಕ ಸಾಮಾಜಿಕ ಕಾಳಜಿ ವಹಿಸಿದ್ದು ಮಾದರಿ. ರಕ್ತದಾನಿ ಬಸವರಾಜ ಒಂದು ಬಾರಿ ರಕ್ತ ದಾನ ಮಾಡಿದರೆ ನಾಲ್ಕು ಜೀವಗಳಿಗೆಸಹಾಯಆಗುತ್ತದೆ.ಜಾತ್ಯಾತೀತ ಎಂಬುದು ರಕ್ತ ಒಂದೆ. ಗ್ರುಪ್ ಓ ಪಾಸಿಟಿವ್ ರಕ್ತದಾನಿ ಹೆಸರು ಉಳಿಯಬೇಕಾದರೆ ಇತಿಹಾಸದ ನಾಡಲ್ಲಿ ಇತಿಹಾಸ ಮಾಡಿದವ–ರಿಗೆ ಗೌರವ ಅರ್ಪಣೆ ಆಗಬೇಕು ಎಂಬುದು ನಮ್ಮೆಲ್ಲರ ಒತ್ತಾಯವಾಗಿದೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಪುರಸಭೆ ಸದಸ್ಯರಾದ ಬಸವರಾಜ ತೀರ್ಥಪ್ಪನವರ, ಗಿರೀಶ್ ಶೆಟ್ಟರ್, ಕೆಪಿಸಿಸಿ ಹಿರಿಯ ಡಾ. ಎಂ.ಎಚ್.ಚಲವಾದಿ, ಚಂದ್ರು ಕಾಚೆಟ್ಟಿ, ಎಂ.ಎಸ್.ಹಿರೇಹಾಳ, ಚಂದ್ರು ಸೂಡಿ, ಕಲ್ಯಾಣಶೆಟ್ಟಿ, ಬಿ.ಎಲ್.ಹೂಲಿ, ಕುಮಾರ್ ಹಿರೇಮಠ,ಎಸ್.ಡಿ.ರೋಣದ,ರಾಚಣ್ಣ ಪಟ್ಟಣದ, ಸಿದ್ದಣ್ಣ ಫತ್ತೇಪೂರ, ಸಿ.ಯು.ಪಟ್ಟಣದ,ಸುನೀಲ ಬಂಗಾರಶೆಟ್ಟರ, ಶಹಾಜಿ ಪವಾರ್, ರವಿ ಅಬ್ಬಿಗೇರಿ, ಬಸು ಪಟ್ಟಣಶೆಟ್ಟಿ, ಸಂತೋಷ ಜವಳಿ, ಸೇರಿದಂತೆ ಇತರರು ಹಾಜರಿದ್ದರು.

# ಮೂಡಲಗಿಯಲ್ಲಿ ವೈಭವದ ನವರಾತ್ರಿ ಉತ್ಸವ



**ಮೂಡಲಗಿ :** 16 ವರ್ಷದಿಂದ ನವರಾತ್ರಿಯ ಅಂಗವಾಗಿ ಬಸವ ರಂಗ ಮಂಟಪ್ಪದಲ್ಲಿ ದುರ್ಗಾಮಾತಾ ಮೂರ್ತಿ ಸ್ಥಾಪನೆ ಅಂಗವಾಗಿ ವಿವಿದ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿರುವ "ನವರಾತ್ರಿ ಉತ್ಸವ" ಸಮಿತಿಯಿಂದ ಬುಧವಾರ ಸಂಜೆ ದುರ್ಗಾ ಮಾತೆಯ ಮೂರ್ತಿಯನ್ನು ವಾಹನದ ಮೇಲೆ ಸ್ಥಾಪಿಸಿ ಪೂಜಿಸಿ ಸಕಲ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಗಾಂಧಿ ಚೌಕ್ ನಿಂದ ಪ್ರಾರಂಭವಾಗಿ ಪಟ್ಟಣದ ಪ್ರಮುಖ ವೃತ್ತಗಳಾದ ಬಸವೇಶ್ವರ ವೃತ್ತ, ಸಂಗಪ್ಪಣ್ಣ ವೃತ್ತ, ಅಮನ ನಗರ, ಅಂಬೇಡ್ಕರ್ ವೃತ್ತ, ಕಲ್ಮೇಶ್ವರ ವೃತ್ತ, ಕಾಲೇಜು ರಸ್ತೆ ಮಾರ್ಗವಾಗಿ ಗುಡ್ಲಮಡ್ಡಿ ಈರಣ್ಣ ದೇವಸ್ಥಾನದ ವರೆಗೆ ಸಾಗಿ ಮರಳಿ ಅದೇ ಮಾರ್ಗವಾಗಿ ಎಸ್ ಎಸ್ ಆರ್ ಕಾಲೇಜಿನ ವರೆಗೆ ಬಂದು ಬಿಇಓ ಆಫೀಸ್ ಹತ್ತಿರ ಸಾಗುತ್ತ ಲಕ್ಷೀ ನಗರ ಮಾರ್ಗವಾಗಿ ಬಸ್ ನಿಲ್ದಾಣ ಹತ್ತಿರ ಬಂದು, ಚನ್ನಮ್ಮ ವೃತ್ತ, ಕರೆಮ್ಮ ವೃತ್ತಗಳನ್ನು ಸಂಚರಿಸಿ ಕೊನೆಗೆ ಬಸವೇಶ್ವರ ವೃತ್ತದ ಬಳಿ ಇರುವ ಬಸವ ಮಂಟಪದ ಮೂಲಕ ವೇದಿಕೆಗೆ ದುರ್ಗಾ ಮಾತೆಯ ಭವ್ಯ ಮೆರವಣಿಗೆ ಆಗಮಿಸಿತು. ಗುರುವಾರ ವೇದ ಮಂತ್ರಗಳ ಘೋಷನೆಯೊಂದಿಗೆ ಮೂರ್ತಿಯ ಪ್ರತಿಷ್ಠಾಪನೆ ಹಾಗೂ ಪ್ರಾಣ ಪ್ರತಿಷ್ಠಾನ ಮಾಡಲಾಯಿತು,ನಿತ್ಯ ಶ್ರೀರಂಗ ಜೋಶಿ ಅವರಿಂದ ಸಕಲ ಪುಷ್ಪ ಅಂಲಕಾರದಿಂದ ದೇವಿಗೆ ಪೂಜೆ ಸಲ್ಲಿಸುತ್ತಿದ್ದಾರೆ, ಸಂಜೆ ಶರಣ ಸದಾಶಿವ ತಲಬಟ್ಟಿ ಅವರಿಂದ ದೇವಿ ಪಾರಾಯನ ಮತ್ತು ನವರಾತ್ರಿಯ ಬಗ್ಗೆ ಪ್ರವಚನ ಜರುಗಿತು ನಂತರ ಮಂಗಳಮುಖಿ ಕಮಲಾದೇವಿ ತಂಡದಿಂದ ದೇವಿನೃತ್ಯ ನಂತರ ಭರತ ನ್ಯಾಟ ಕಾರ್ಯಕ್ರಮ ಜರುಗಿದವು.

# ರನ್ನಬೆಳಗಲಿ ಜನತೆಯಿಂದ ಸಂಸದ ಕಾರಜೋಳಗೆ ಪೌರಸನ್ಮಾನ

## ಮುಧೋಳ ಕ್ಷೇತ್ರದ ಜನರ ಋಣ ಮರೆಯಲ್ಲ ಸಾಧ್ಯವಿಲ್ಲ: ಸಂಸದ ಗೋವಿಂದ ಕಾರಜೋಳ



**ಮಹಾಲಿಂಗಪುರ :** ಚಿತ್ರದುರ್ಗದ ಸಂಸದನಾದರೂ ಮುಧೋಳ ಕ್ಷೇತ್ರದ ಜೊತೆ ನನ್ನದು ಮೂರು ದಶಕಗಳ ಅನುಪಮ ಬಾಂಧವ್ಯವಿದೆ. ಮುಧೋಳ ಕ್ಷೇತ್ರದ ಜನರ ಋಣವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ಶುಕ್ರವಾರ ಮುಧೋಳ ಮತಕ್ಷೇತ್ರದ ರನ್ನಬೆಳಗಲಿ ಪಟ್ಟಣದ ಬಂದಲಕ್ಷ್ಮಿ ಭವನದಲ್ಲಿ ಪೌರಸನ್ಮಾನ ಸ್ವೀಕರಿಸಿ, ಮಾತನಾಡಿದ ಅವರು ಈಗ ಭಾಜಪ ಸದಸ್ಯತ್ವ ಅಭಿಯಾನ ಆರಂಭವಾಗಿದ್ದು, ಕೇಂದ್ರದ ಅಣತಿಯಂತೆ ಹಿಂದೆ ದೇಶಾದ್ಯಂತ ದಾಖಲೆಯ 18 ಕೋಟಿ ಸದಸ್ಯತ್ವ ನೋಂದಣಿ, ಮೀರಿ ಸದಸ್ಯತ್ವ ಆಗಬೇಕಿದ್ದು, ನನಗೆ ಬಾಗಲಕೋಟ ಮತ್ತು ಮುಧೋಳ ಕ್ಷೇತ್ರಗಳಲ್ಲಿ ಒಟ್ಟು ಐವತ್ತು ಸಾವಿರ ಸದಸ್ಯತ್ವದ ಹೊಣೆಗಾರಿಕೆಯನ್ನು ನೀಡಿದ್ದಾರೆ.ಅದರಂತೆ ಮೊದಲಿನಂತೆ ಈಗಲೂ ನನಗೆ ಇಲ್ಲಿಯ ನಾಗರಿಕರು ಸಹಕರಿಸಬೇಕು ಎಂದರು.

ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಹೊಸಮುಖ ಹೊತ್ತು ಚುನಾವಣೆ ಎದುರಿಸಿದೆ. ಅಲ್ಲಿ ಪುರುಷರಿಗಿಂತ ಮಹಿಳೆಯರೇ ನನಗೆ ಹೆಚ್ಚಿನ ಮತಗಳನ್ನು ನೀಡಿ ಕೇಂದ್ರಕ್ಕೆ ಕಳಿಸಿದರು. ಅವರ ಕಾರ್ಯಕ್ಕೆ ನಾನು ಚಿರಋಣಿಯಾಗಿದ್ದೇನೆ. ಮುಧೋಳ ಕ್ಷೇತ್ರದಲ್ಲಿ ಏಳು ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಿದಂತೆ ಅಲ್ಲಿಯೂ ಕೂಡ ಅನೇಕ ಬ್ಯಾರೇಜಗಳ ನಿರ್ಮಾಣ ಮತ್ತು ಅಭಿವೃದ್ಧಿ ಕೆಲಸಗಳಿಗೆ ಸಂಕಲ್ಪ ಮಾಡಿ, ಕಾರ್ಯಪ್ರವೃತ್ತನಾಗಿದ್ದೇನೆ. ನಾನು ಮುಧೋಳ ಕ್ಷೇತ್ರವನ್ನು ಮರೆಯೋದಿಲ್ಲ, ಇಲ್ಲಿಯೂ ಸಹ ಅಭಿವೃದ್ಧಿ ಕೆಲಸಗಳನ್ನು ಮುಂದುವರಿಸುತ್ತೇನೆ ಎಂದರು.

ಭಾಜಪ ಪಕ್ಷದ ಮುಖಂಡ ಧರೆಪ್ಪ ಸಾಂಗ್ಲಿಕರ ಮಾತನಾಡಿ ನಾವು ವಿರೋಧ ಪಕ್ಷದಲ್ಲಿದ್ದಾಗಲೂ ಸಂಸದ ಕಾರಜೋಳರನ್ನು ಅಭಿವೃದ್ಧಿ ಪರ ವ್ಯಕ್ತಿ ಎಂದೇ ಕರೆಯುತ್ತಿದ್ದೇವು. ಈಗಲೂ ಜನೋಪಯೋಗಿ ಕೆಲಸಗಳಿಂದ ನಾಡಿನಾದ್ಯಂತ ಅವರ ಹೆಸರು ಉತ್ತುಂಗದಲ್ಲಿದೆ ಎಂದರು.

ಬೆಳಗಲಿ ಪಟ್ಟಣದ ವಿವಿಧ ಸಮುದಾಯ ಮತ್ತು ಸಂಘಟನೆಗಳು ಸಸಂಸದ ಗೋವಿಂದ ಕಾರಜೋಳ ಅವರಿಗೆ ಸನ್ಮಾನಿಸಿ ಗೌರವಿಸಿದರು.

ಮುಖಂಡರಾದ ಎಸ್.ಟಿ.ಪಾಟೀಲ್, ಅರುಣ ಕಾರಜೋಳ, ಕುಮಾರ ಹುಲಕುಂದ, ಬೆಳಗಲಿ ಪಪಂ ರೂಪಾ ಹೊಸಟ್ಟಿ, ಉಪಾಧ್ಯಕ್ಷೆ ಸಹನಾ ಸಾಂಗ್ಲಿಕರ, ಕೆ.ಆರ್.ಮಾಚಪ್ಪನ್ನವರ, ಹಣಮಂತ ತುಳಸಿಗೇರಿ, ಸಂಗನಗೌಡ ಕಾತರಕಿ, ಶ್ರೀಶೈಲಗೌಡ ಪಾಟೀಲ್, ಮಹಾಲಿಂಗಪ್ಪ ಗುಂಜಿಗಾಂವಿ, ಸಂಗನಗೌಡ ಪಾಟೀಲ, ಸಿದ್ದುಗೌಡ ಪಾಟೀಲ್, ಚಿಕ್ಕಪ್ಪ ನಾಯಕ, ಸದಾಶಿವ ಚಿಚಖಂಡಿ, ನಾಗಪ್ಪ ಅಂಬಿ, ಶಿವನಗೌಡ ಪಾಟೀಲ, ಬಸವರಾಜ ಪುರಾಣಿಕ, ಪುಟ್ಟು ಕುಲಕರ್ಣಿ, ರಾಜು ಪಾಟೀಲ್, ಅಶೋಕ ಸಿದ್ದಾಪುರ, ಲಕ್ಕಪ್ಪ ಮೇಡ್ಯಾಗೋಳ ಸೇರಿದಂತೆ ಹಲವರು ಇದ್ದರು. ಭಾಜಪ ಮುಖಂಡ ಪಂಡಿತ ಪೂಜಾರ ಸ್ವಾಗತಿಸಿ-ವಂದಿಸಿದರು.

# ನೂತನ 3ನೇ ಶಾಖೆ ಪ್ರಾರಂಭಿಸಿದ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ



**ಮೂಡಲಗಿ :** ಕಳೆದ 40 ವರ್ಷಗಳಿಂದ ಸಹಕಾರ. ಸಾಮಾಜಿಕ, ರಾಜಕೀಯ ಚಟುವಟಿಕೆಗಳ ಮೂಲಕ ಈ ಭಾಗದ ಜನರ ಸೇವೆಯನ್ನು ಮಾಡುತ್ತಾ ಬಂದಿದ್ದೇನೆ. ಅದರ ಮುಂದುವರೆದ ಭಾಗವಾಗಿ ನನ್ನ ಸೇವೆಯನ್ನು ಇನ್ನಷ್ಟು ನಿಕಟಗೊಳಿಸಬೇಕೆಂಬ ಹಂಬಲದೊಂದಿಗೆ ಸಮೀಪದ ಯಾದವಾಡ ಪಟ್ಟಣದಲ್ಲಿ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ ಕಲ್ಲೋಳಿ ಇದರ ನೂತನ 3ನೇ ಶಾಖೆಯನ್ನು ಪ್ರಾರಂಭಿಸುತ್ತಿದ್ದೆವೆಂದು ರಾಜ್ಯಸಭಾ ಸಂಸದ ಹಾಗೂ ಸಂಸ್ಥಾಪಕ ಅಧ್ಯಕ್ಷ ಈರಣ್ಣ ಕಡಾಡಿ ಹರ್ಷ ವ್ಯಕ್ತಪಡಿಸಿದರು.

ಶುಕ್ರವಾರ ತಾಲೂಕಿನ ಯಾದವಾಡ ಪಟ್ಟಣದ ಬಸವೇಶ್ವರ ಸರ್ಕಲ್ ಹತ್ತಿರ ನೂತನ ಶಾಖೆಯ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು, ಚಿಕ್ಕ ಉಳಿತಾಯ ಮಾಡುವ ಮಧ್ಯಮ ವರ್ಗದ ಬಂಧುಗಳಿಗೆ ಆರ್ ಡಿ ಸೌಲಭ್ಯ ನಿಮ್ಮ ಮನೆ ಬಾಗಿಲಿಗೆ ಆರ್ಥಿಕ ಸೇವೆ ತಲುಪಿಸಿ ಈ ಭಾಗದ ಜನರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಿ ನಿಮ್ಮ ಅಭಿವೃದ್ದಿಗೆ ಅಳಿಲು ಸೇವೆ ಸಲ್ಲಿಸುವ ಸಂಕಲ್ಪದೊಂದಿಗೆ ಸಹಕಾರಿ ಸಂಸ್ಥೆಯನ್ನು ಪ್ರಾರಂಭಿಸಿದ್ದೇವೆ ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಭಾಗೋಜಿಕೊಪ್ಪ ಡಾ.ಶಿವಲಿಂಗ ಮುರುಘರಾಜೇಂದ್ರ ಮಹಾಸ್ವಾಮಿಗಳು ಮಾತನಾಡಿ ಪ್ರತಿಯೊಂದು ಗ್ರಾಮಗಳಲ್ಲಿ ಸದೃಡ ಸೌಹಾರ್ದ ಸಹಕಾರಿ ಸಂಘಗಳು ಇದ್ದರೆ ಗ್ರಾಹಕರಿಗೆ, ರೈತರಿಗೆ, ಸಣ್ಣ ವ್ಯಾಪಾರಸ್ಥರಿಗೆ ಅನೂಕೂಲವಾಗಲಿದೆಂದರು.ಇದೇ ಸಂದರ್ಭದಲ್ಲಿ ಹಲವು ಪೂಜ್ಯರನ್ನು ಸಂಸದ ಈರಣ್ಣ ಕಡಾಡಿ ಅವರು ಸನ್ಮಾನಿಸಿದರು.

ಸಹಕಾರಿ ಉಪಾಧ್ಯಕ್ಷ ಶ್ರೀಶೈಲ ತುಪ್ಪದ, ಶ್ರೀಶೈಲ ಢವಳೇಶ್ವರ, ರಾಜಶೇಖರ ಕಲ್ಯಾಣಿ, ಆನಂದ ರೂಗಿ, ಬಸವರಾಜ ಹಿಡಕಲ್, ಸುರೇಶ ಒಣಕಿ, ಪ್ರಭು ಹಿರೇಮಠ, ಶ್ರೀಶೈಲ ಪೂಜೇರಿ, ತಮ್ಮಣ್ಣ ದೇವರ, ಸುಭಾಸ ಒಂಟಗೂಡಿ, ಈರಪ್ಪ ದೇಯನ್ನವರ, ಬಸವರಾಜ ಕತ್ತಿ, ಹನಮಂತ ಕಲಕುಟ್ರಿ, ಪರಪ್ಪ ಗಿರೆಣ್ಣವರ ಸೇರಿದಂತೆ ಸಹಕಾರಿ ಆಡಳಿತ ಮಂಡಳಿ ಸದಸ್ಯರು, ಸಲಹಾ ಸಮಿತಿ ಸದಸ್ಯರು ಹಾಗೂ ಸಹಕಾರಿಗಳು ಉಪಸ್ಥಿತರಿದ್ದರು.

# ಭಕ್ತರೆಲ್ಲರೂ ಸದಾ ಸಂತೋಷವಾಗಿರಬೇಕು ಎನ್ನುವುದೇ ಶ್ರೀಗಳ ಪರಮ ಗುರಿ



**ಮೂಡಲಗಿ :** ಅರಭಾವಿಮಠದ ಸಿದ್ದಲಿಂಗ ಸ್ವಾಮಿಗಳು ತಮ್ಮ ಜೀವನದುದ್ದಕ್ಕೂ ಭಕ್ತರ ಬಗ್ಗೆ ಅಪಾರ ಪ್ರೀತಿ, ಅನುಕಂಪವನ್ನು ಹೊಂದಿ, ಭಕ್ತರೋದ್ಧಾರಕ್ಕಾಗಿ ತಮ್ಮ ಜೀವನವನ್ನು ಸವಿಸಿದ ಪುಣ್ಯಪುರುಷರಾಗಿದ್ದರು' ಎಂದು ಗದಗ-ಡಂಬಳದ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಡಾ. ತೋಂಟದ ಸಿದ್ಧರಾಮ ಸ್ವಾಮಿಗಳು ಹೇಳಿದರು.

ಮೂಡಲಗಿ ತಾಲ್ಲೂಕಿನ ಅರಭಾವಿಯ ದುರುಂಡೀಶ್ವರ ಪುಣ್ಯಾರಣ್ಯ ಮಠದ ಲಿಂಗೈಕ್ಯ ಸಿದ್ಧಲಿಂಗ ಸ್ವಾಮಿಗಳ ಪ್ರಥಮ ಪುಣ್ಯಸ್ಮರಣೆ, ಗದ್ದುಗೆಯ ಉದ್ಘಾಟನೆ ಹಾಗೂ 'ಪುಣ್ಯಾರಣ್ಯ ಪುಷ್ಪ' ಸಂಸ್ಮರಣ ಸಂಪುಟ ಬಿಡುಗಡೆ ಸಮಾರಂಭದ ಸಾನಿಧ್ಯವಹಿಸಿ ಮಾತನಾಡಿದ ಅವರು ಭಕ್ತರೆಲ್ಲರೂ ಸದಾ ಸಂತೋಷವಾಗಿರಬೇಕು ಎನ್ನುವುದೇ ಶ್ರೀಗಳ ಪರಮ ಗುರಿಯಾಗಿತ್ತು ಎಂದರು.

ಅರಭಾವಿಯ ಪುಣ್ಯಾರಣ್ಯ ಮಠದ ಪೀಠಾಧಿಪತಿಗಳಾಗಿ 45 ವರ್ಷಗಳವರೆಗೆ ಆದಿ ದುರುದುಂಡೀಶ್ವರರಗುರು ಪರಂಪರೆಯನ್ನು ಚಾಚೂ ತಪ್ಪದೆ ನಡೆಸಿಕೊಂಡು ಬಂದಿದ್ದರು.ಶ್ರೀಗಳು ಭೌತಿಕವಾಗಿಇಂದುಇಲ್ಲವಾಗಿದ್ದರು ಸಹ ನಾಡಿನ ಭಕ್ತರ ಹೃದಯದಲ್ಲಿ ಶಾಶ್ವತವಾಗಿ ನೆಲೆ ನಿಂತಿದ್ದಾರೆಎಂದರು.

ಸಿದ್ಧಲಿಂಗ ಸ್ವಾಮಿಗಳ ಲಿಂಗೈಕ್ಯರಾದ ಒಂದು ವರ್ಷದ ಒಳಗಾಗಿ ಶ್ರೀಗಳಗದ್ದುಗೆಯನ್ನು ನಿರ್ಮಿಸುವುದು ಮತ್ತು ಶ್ರೀಗಳನ್ನು ನೆನಪಿಸುವ ಪುಣ್ಯಾರಣ್ಯ ಪುಷ್ಪ ಸಂಸ್ಮರಣ ಗ್ರಂಥವನ್ನು ತರುವ ಸಂಕಲ್ಪವು ಪವಾಡ ಸದೃಶ್ಯವಾಗಿ ಇಂದು ಇಡೇರಿದ್ದು ಸಂತೋಷ ತಂದಿದೆ ಎಂದರು.

ಆಪ್ತ ಬರಹಗಳಿಂದ, ಹೃದಯಾಂತರದ ಭಾವನೆಗಳ ಭಕ್ತಿಯ ಬರಹಗಳಿಂದ ರೂಪಗೊಂಡಿರುವ ಸಿದ್ಧಲಿಂಗ ಸ್ವಾಮಿಗಳ ಕುರಿತಾದ ಪುಣ್ಯಾರಣ್ಯ ಪುಷ್ಪ ಸಂಸ್ಮರಣಗ್ರಂಥವು ಪವಿತ್ರವಾದಗ್ರಂಥವಾಗಿದೆ. ಸಿದ್ಧಲಿಂಗ ಸ್ವಾಮಿಗಳಂತೆ ಈಗಿರುವ 12ನೇ ಪೀಠಾಧಿಪತಿಗುರುಬಸವಲಿಂಗ ಸ್ವಾಮಿಗಳು ಗುರು ಪರಂಪರೆಯನ್ನು ಮುಂದುವರಿಸಿಕೊಂಡು ಹೊರಟಿದ್ದು ಭಕ್ತರ ಪ್ರೀತಿ, ವಿಶ್ವಾಸವನ್ನುಅನೂಚವಾಗಿ ಗೆದ್ದಿರುವುದು ಸಂತೋಷತಂದಿದೆ ಎಂದರು.

ಸಮಾರಂಭದ ನೇತೃತ್ವವಹಿಸಿದ್ದ ಅರಭಾವಿ ಮಠದ ಪೀಠಾಧಿಪತಿಗುರುಬಸವಲಿಂಗ ಸ್ವಾಮಿಗಳು ಮಾತನಾಡಿ ಸಿದ್ಧಲಿಂಗ ಸ್ವಾಮಿಗಳ ಪ್ರೀತಿ, ವಾತ್ಸಲ್ಯ, ಅಂತ:ಕರಣ ಬಹಳದ ದೊಡ್ಡದು. ಅವರಅಂತ:ಕರಣದಲ್ಲಿ ಮಠದ ಸೇವೆಯನ್ನು ಮಾಡುವ ಭಾಗ್ಯ ನನ್ನದಾಗಿದೆ. ಪೂಜ್ಯರಕಾರುಣ್ಯದಲ್ಲಿ ಮುನ್ನಡೆಯುತ್ತೇನೆಎಂದರು.

ಕಡಕೋಳದ ವೀರಕ್ತಮಠದ ಸಚ್ಚಿದಾನಂದ ಸ್ವಾಮಿಗಳು, ಬೆಲ್ಲದ ಬಾಗೇವಾಡಿಯ ಶಿವಾನಂದ ಸ್ವಾಮಿಗಳು, ಹುಕ್ಕೇರಿಯ ಶಿವಬಸವ ಸ್ವಾಮಿಗಳು, ಶೇಗುಣಸಿಯ ಡಾ. ಮಹಾಂತ ಪ್ರಭು ಸ್ವಾಮಿಗಳು ಆರ್ಶಿವಚನದ ನುಡಿಗಳನ್ನು ಹೇಳಿದರು.

ಪುಣ್ಯಾರಣ್ಯ ಪುಷ್ಪ ಸಂಸ್ಮರಣದ ಸಂಪಾದಕ ಜಾನಪದ ವಿದ್ವಾಂಸ ಡಾ.ಸಿ.ಕೆ.ನಾವಲಗಿ, ವಿಧಾನ ಪರಿಷತ್ ಸದಸ್ಯ ಮಹಾಂತೇಶ ಕವಟಗಿಮಠ, ನಿವೃತ್ತ ಪ್ರಾದೇಶಿಕ ಆಯುಕ್ತಎಂ.ಜಿ. ಹಿರೇಮಠ ಮಾತನಾಡಿದರು.

ಶಿಂಧಿಕುರಬೇಟದ ಬಬಲಾದಿ ಸದಾಶಿವ ಮಠದ ಸ್ವಾಮೀಜಿ, ಬೈಲಹೊಂಗಲದ ಮಹಾಂತೇಶ ಕೌಜಲಗಿ, ಸರ್ವೋತ್ತಮ ಜಾರಕಿಹೊಳಿ ಅತಿಥಿಯಾಗಿ ವೇದಿಕೆಯಲ್ಲಿ ಇದ್ದರು. ಶ್ರೀಗಳ ಗದ್ದುಗೆ ನಿರ್ಮಾಣದ ಶಿಲ್ಪಿ ಮತ್ತು ನಿರ್ಮಾಣಕ್ಕೆದೇಣಿಗೆ ನೀಡಿರುವ ಮಹನೀಯರನ್ನು ಮತ್ತು ದಾಸೋಹಿಗಳನ್ನು ಸನ್ಮಾನಿಸಿದರು.ನಾಡಿನ ವಿವಿಧೆಡೆಯಿಂದ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪ್ರೊ.ವೀರಪಾಕ್ಷಿ ನಾಯಿಕ ನಿರೂಪಿಸಿದರು.

# ಅಭಿವೃದ್ಧಿ ಅಧಿಕಾರಿಗಳ ಮುಷ್ಕರ

## ಗ್ರಾಮ ಪಂಚಾಯಿಗಳಿಗೆ ಬೀಗ, ಸದಸ್ಯರಿಗೆ ಪೀಕಲಾಟ



**ತೇರದಾಳ :** ನಾನಾ ಬೇಡಿಕೆಗಳಿಗೆ ಆಗ್ರಹಿಸಿ ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿ ಸೇರಿದಂತೆ ಸಿಬ್ಬಂದಿ ಅನಿರ್ಧಿಷ್ಠಾವಧಿ ಮುಷ್ಕರ ಕೈಗೊಂಡ ಹಿನ್ನಲೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಎರಡು ದಿನಗಳಿಂದ ಬೀಗ ಹಾಕಲಾಗಿದೆ. ಇದರಿಂದ ಪ್ರತಿನಿತ್ಯ ಗ್ರಾಪಂ ಗಳಲ್ಲಿ ಠಿಕಾಣಿ ಹೂಡುತ್ತಿದ್ದ ಸದಸ್ಯರಿಗೆ ಪೀಕಲಾಟ ಶುರುವಾಗಿದೆ ಎಂದರೆ ತಪ್ಪಾಗಲಾರದು.

ಹೌದು. ಗ್ರಾಮ ಪಂಚಾಯತಿಗಳಿಗೆ ಸಾರ್ವಜನಿಕರಗಿಂತ ಸದಸ್ಯರುಗಳೇ ಹೆಚ್ಚಾಗಿ ಹೋಗುವುದು ವಾಡಿಕೆಯಾಗಿದೆ. ಕಾರಣ ಬಹುತೇಕ ಗ್ರಾಪಂಗಳಲ್ಲಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿಗಳನ್ನು ಸದಸ್ಯರುಗಳೆ ಮಾಡುತ್ತಾರೆ. ಇದರಿಂದ ಒಂದಿಲ್ಲೊಂದು ಕೆಲಸ ತಗೆದುಕೊಂಡು ಪ್ರತಿದಿನ ಗ್ರಾಪಂ ಕಚೇರಿಗೆ ಹೋಗಿ ಕುಳಿತುಕೊಳ್ಳುವುದು ಕಂಡು ಬರುವುದು ಸಹಜ. ಎರಡು ದಿನಗಳಿಂದ ಗ್ರಾಪಂಗಳಿಗೆ ಬೀಗ ಹಾಕಿರುವುದರಿಂದ ಸದಸ್ಯರಿಗೆ ಕುಳಿತುಕೊಳ್ಳಲು ಜಾಗ ಕೂಡ ಇಲ್ಲದಂತಾಗಿದ್ದು, ಒಂದು ರೀತಿಯಲ್ಲಿ ಸಂತೆಯಲ್ಲಿ ಕರು ಕಳೆದುಕೊಂಡಂತೆ ನಮ್ಮ ಸ್ಥಿತಿ ಆಗಿದೆ ಎಂದು ತೇರದಾಳ ತಾಲೂಕು ವ್ಯಾಪ್ತಿಯ ಗ್ರಾಪಂ ಸದಸ್ಯರೊಬ್ಬರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ನಾಳೆ ಭಾನುವಾರ ಹೇಗೂ ಸರಕಾರಿ ರಜೆ. ಸೋಮವಾರವೂ ಅಧಿಕಾರಿಗಳ ಮುಷ್ಕರ ಮುಂದುವರೆದರೆ ಮತ್ತಷ್ಟು ನಮಗೆ ತೊಂದರೆ ಆಗುತ್ತದೆ ಎಂಬುದು ಗ್ರಾಮಸ್ಥರು ಹಾಗೂ ಸದಸ್ಯರ ಅಭಿಪ್ರಾಯವಾಗಿದೆ.


# ಅಂತ್ಯಸಂಸ್ಕಾರಕ್ಕೆ ಖಬರಸ್ಥಾನವಿಲ್ಲದೇ ಪರದಾಟ

**ರಬಕವಿ-ಬನಹಟ್ಟಿ :** ಮೃತಪಟ್ಟವರನ್ನು ಅಂತ್ಯ ಸಂಸ್ಕಾರ ಮಾಡಲು ಖಬರಸ್ಥಾನವಿಲ್ಲದ ಕಾರಣ ಪಕ್ಕದ ಬನಹಟ್ಟಿ ಪಟ್ಟಣದಲ್ಲಿ ಅಂತ್ಯಕ್ರಿಯೆ ಮಾಡುವಲ್ಲಿ ಕಾರಣವಾಗಿದೆ.

ಸಮೀಪದ ಯಲ್ಲಟ್ಟಿ ಗ್ರಾಮದಲ್ಲಿ ಶುಕ್ರವಾರ ತಡರಾತ್ರಿ ವಯೋಸಹಜ ಕಾಯಿಲೆಯಿಂದ ಮುಸ್ಲಿಂ ಸಮುದಾಯದ 65 ವರ್ಷದ ಹುಸೇನಸಾಬ ಗಡ್ಡೇಕರ ಮೃತಪಟ್ಟಿದ್ದನು. ಅಂತ್ಯ ಸಂಸ್ಕಾರ ಮಾಡಲು ಖಬರಸ್ಥಾನವಿಲ್ಲದ ಕಾರಣ ಕುಟುಂಬಸ್ಥರು ಪರದಾಡುವಲ್ಲಿ ಕಾರಣವಾಯಿತು.

ಪ್ರತಿಭಟನೆ: ಅಂತ್ಯಕ್ರಿಯೆಗೆ ಜಾಗೆಯಿಲ್ಲದ ಕಾರಣ ಕೆಲ ಕಾಲ ರಸ್ತೆ ಮೇಲೆ ಶವವಿಟ್ಟು ಪ್ರತಿಭಟಿಸಲಾಯಿತು.

ಆಕ್ರೋಶ: ಕಳೆದ 20 ವರ್ಷಗಳಿಂದ ಖಬರಸ್ಥಾನ ಹಾಗು ಈದ್ಗಾ ಬೇಕೆಂದು ಹೋರಾಟ ನಡೆಸಿದ್ದರೂ ಪ್ರಯೋಜನವಾಗಿಲ್ಲ. ಶವ ಸಂಸ್ಕಾರಕ್ಕೆ ಜಾಗ ನೀಡದ ಕಾರಣ ಮತ್ತೇ ಆಕ್ರೋಶಕ್ಕೆ ಕಾರಣವಾಯಿತು.



'ಖಬರಸ್ಥಾನ ಜಾಗೆಗೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಗ್ರಾಮದಲ್ಲಿ ಕಂದಾಯ ಪ್ರದೇಶವಿಲ್ಲದ ಕಾರಣ ವಿಳಂಬಕ್ಕೆ ಕಾರಣವಾಗಿದೆ. ಶೀಘ್ರವೇ ಸೂಕ್ತ ನಿರ್ಧಾರದೊಂದಿಗೆ ಅಂತ್ಯ ಸಂಸ್ಕಾರಕ್ಕೆ ವ್ಯವಸ್ಥೆ ಕಲ್ಪಿಸಲಾಗುವದು'.

। ಮಹಾದೇವ ಮೋಪಗಾರ
ಅಧ್ಯಕ್ಷರು, ಗ್ರಾಪಂ ಯಲ್ಲಟ್ಟಿ.

ಖಾಸಗಿ ಜಾಗೆಯಲ್ಲಿ ಅಂತ್ಯಕ್ರಿಯೆ: ಈಗಾಗಲೇ ಗ್ರಾಮದಲ್ಲಿರುವ ಮುಸ್ಲಿಂ ಕುಟುಂಬಗಳು ತಮ್ಮ ಜಮೀನುಗಳಲ್ಲಿಯೇ ತಮ್ಮ ಕುಟುಂಬಸ್ಥರ ಅಂತ್ಯಕ್ರಿಯೆ ಮಾಡುತ್ತಿದ್ದಾರೆ. ಗ್ರಾಮದಲ್ಲಿರುವ ನಾಲ್ಕೈದು ಕುಟುಂಬಗಳಿಗೆ ಯಾವದೇ ಸ್ವಂತ ಜಮೀನುಗಳಿಲ್ಲ. ಅಂಥಹ ಕುಟುಂಬಸ್ಥರು ಈಗಲೂ ಶವ ಸಂಸ್ಕಾರಕ್ಕೆ ಪರದಾಡುವ ಸ್ಥಿತಿ ಎದುರಾಗಿದ್ದು, ಸತ್ತ ನಂತರ ಕೆಲವರು ಬೇರೆ ಊರುಗಳಿಗೆ ತೆರಳಿ ಅಥವಾ ಮೃತರ ಸ್ವಂತ ಊರುಗಳಲ್ಲಿ ಅಂತ್ಯಕ್ರಿಯೆ ಮಾಡುತ್ತಿದ್ದಾರೆ.



**ಭರವಸೆ:**
ರಸ್ತೆ ಮೇಲೆ ಶವವಿಟ್ಟು ಪ್ರತಿಭಟನೆಯಲ್ಲಿ ತೊಡಗಿದ್ದ ಕುಟುಂಬಸ್ಥರಿಗೆ ಅಧಿಕಾರಿಗಳು ಭರವಸೆ ನೀಡಿದ ಹಿನ್ನಲೆ ಹೊತ್ತೊಯ್ದು ಪಕ್ಕದ ಬನಹಟ್ಟಿ ಗ್ರಾಮದಲ್ಲಿ ಅಂತ್ಯ ಸಂಸ್ಕಾರ ಮಾಡಿದ್ದಾರೆ.

# ದಿಶಾ ಕಾರ್ಯಕ್ರಮದ ಫಲಾನುಭವಿಗಳಿಗೆ ಚೆಕ್ ವಿತರಣೆ



**ಇಳಕಲ್ಲ :** ಆಶಾದೀಪ ಅಂಗವಿಕಲರ ಸರ್ವ ಅಭಿವೃದ್ದಿ ಸೇವಾ ಸಂಸ್ಥೆ ಮತ್ತು ದಿ ನ್ಯಾಷನಲ್ ಟ್ರಸ್ಟ್ ನ್ಯೂ ದೆಹಲಿ ಇವರ ಸಂಯುಕ್ತ ಆಶ್ರಯದಲ್ಲಿ ಸ್ಥಳಿಯ ಸಮಿತಿ ಲೋಕಲ್ ಕಮಿಟಿ ಸಭೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.


ಈ ಒಂದು ಸಭೆಯ ಅಧ್ಯಕ್ಷತೆಯನ್ನು ಶಂಕ್ರಮ್ಮ ಧೂಪದ ಸ್ಥಳೀಯ ಸಭೆಯ ಸದಸ್ಯರಾದ ನಿರ್ಮಲಾ ತಳೆವಾಡ.ಶಿವಲೀಲಾ ಹಿರೇಮಠ.ಲಲಿತಾ ಹಿರೇತೋಟದ.ಆಶಾದೀಪ ಸಂಸ್ಥಾಪಕ ಅಧ್ಯಕ್ಷರಾದ ರಘು ಹುಬ್ಬಳ್ಳಿ ಸಂಸ್ಥೆ ಸಹಕಾರ್ಯದರ್ಶಿ ಯಾದ ಹುಸೇನ ಸಾಬ್ ಮುದಗಲ್. ಸಂಗಪ್ಪ ಕೂಡ್ಲೂರ. ಮಲ್ಲಪ್ಪ ಕುಂಬಾರ. ವಹಿಸಿಕೊಂಡಿದ್ದರು ಈ ಎಲ್ಲಾ ಗಣ್ಯ ಮಾನ್ಯರಿಗೆ ಹೂಗುಚ್ಛ ನೀಡುವ ಮುಖಾಂತರ ಸ್ವಾಗತಿಸಲಾಯಿತು.

ಈ ಕಾರ್ಯಕ್ರವನ್ನು ಉದ್ದೇಶಿಸಿ ಮಾತನಾಡಿದ ಶ್ರೀಮತಿ ಶಂಕ್ರಮ್ಮ ಧೂಪದ ಮಕ್ಕಳ ಏಳಿಗೆಯ ಬಗ್ಗೆ ಇನ್ನಷ್ಟು ತರಬೇತಿಯನ್ನು ನೀಡಿ ಎಲ್ಲಾ ಒಂದು ಕಾರ್ಯಕ್ರಮದಲ್ಲಿ ಮತ್ತು ಪ್ರತಿಯೊಂದು ಕ್ಷೇತ್ರಕ್ಕೆ ಮಕ್ಕಳು ಬರುವ ಹಾಗೆ ಮಾಡಿ ಎಂದು ಸಲಹೆ ನೀಡಿದರು. ಮುಂದುವರೆದು ಮಾತನಾಡಿದ ನಾವು ಆಚರಿಸುವಂಥ ಎಲ್ಲಾ ಕಾರ್ಯಕ್ರಮದಲ್ಲಿ ಮಕ್ಕಳು ವೇಷ ಭೂಷಣ ಮುಖಾಂತರ ಭಾಗವಹಿಸಲು ಪ್ರೇರೇಪಿಸುವಂತೆ ನೀವು ಶಿಕ್ಷಕರಾದವರು ಮಾಡಬೇಕೆಂದು ಹೇಳಿದರು.

ಸಂಸ್ಥಾಪಕ ಅಧ್ಯಕ್ಷರಾದ ರಘು ಹುಬ್ಬಳ್ಳಿಯವರು ದಿಶಾ ಕಾರ್ಯಕ್ರಮದ ಬಗ್ಗೆ ಸ ವಿಸ್ತಾರವಾಗಿ ಬಂದಂತಹ ಪಾಲಕರಿಗೆ ತಿಳಿಸಿದರು ಮತ್ತುಇಂತಹ ಕಾರ್ಯಕ್ರಮಗಳು ನಡೆಯುವುದಕ್ಕೆ ನಿಮ್ಮಂದ ಸಹಾಯ ಸಹಕಾರ ಯಾವಾಗಲು ನಮ್ಮ ಸಂಸ್ಥೆಯ ಮೇಲೆ ಇರಲೆಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ದಿಶಾ ಕಾರ್ಯಕ್ರಮದ ಫಲಾನುಭವಿಗಳಿಗೆ ಚೆಕ್ ವಿತರಿಸಿದರು. ದಿಶಾ ಕಾರ್ಯಕ್ರಮದ ಸಂಯೋಜಕರಾದ ಗಣೇಶ ಗಣಿ. ಸಿಬ್ಬಂದಿಯವರಾದ ಅಣ್ಣಾಸ ನಗರಿ. ಹನುಮಂತ ತಳವಾರ. ಮುತ್ತು ಸಂಕಣನವರ. ಜಮುನಾ ಸಾಕ್ರೆ. ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆ.ಸುರೇಶ ಹಡಪದ. ಸ್ವಾಗತ ಕಾರ್ಯಕ್ರಮ ಅಣ್ಣಾಸಾ ನಗರಿ. ವಂದನಾರ್ಪಣೆ ಗಣೇಶ ಗಣಿ.

# ನವರಾತ್ರಿ ಉತ್ಸವದಲ್ಲಿ ಧರ್ಮ ಸಂಸ್ಕೃತಿ ಶಿಕ್ಷಣ

## ತಾಯಂದಿರು ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಬೇಕು: ಹಾರಿಕಾ ಮಂಜುನಾಥ





**ಮಹಾಲಿಂಗಪುರ :** ಇಂದಿನ ಶಿಕ್ಷಣದ ಜೊತೆಗೆ ಮಕ್ಕಳಿಗೆ ಉತ್ತಮ ಸಂಸ್ಕೃತಿ-ಸಂಸ್ಕಾರ ಕಲಿಸಬೇಕಾದ ಅಗತ್ಯವಿದೆ ಎಂದು ಬೆಂಗಳೂರಿನ ಪ್ರಖರವಾಗ್ಮಿ ಹಾರಿಕಾ ಮಂಜುನಾಥ ಹೇಳಿದರು.

ಪಟ್ಟಣದ ಬನಶಂಕರಿ ದೇವಸ್ಥಾನದಲ್ಲಿ ನಡೆದ ನವರಾತ್ರಿ ಎರಡನೇ ದಿನದ ದೇವಿ ಪುರಾಣ ಹಾಗೂ ದಸರಾ ಸಾಂಸ್ಕೃತಿಕ ಉತ್ಸವದ ಮುಖ್ಯ ಅತಿಥಿಗಳಾಗಿ ಧರ್ಮ ಸಂಸ್ಕೃತಿ ವಿಷಯದ ಕುರಿತು ಮಾತನಾಡಿದ ಅವರು ನಮ್ಮ ಸನಾತನ ಹಿಂದೂ ಧರ್ಮದ ಉಳಿಗಾಗಿ ಇಂದಿನ ಮಕ್ಕಳಲ್ಲಿ ಧರ್ಮ, ಸಂಸ್ಕೃತಿ, ಸಂಸ್ಕಾರದ ಜಾಗೃತಿ ಮೂಡಿಸುವದು ಅಗತ್ಯವಾಗಿದೆ. ಐನೂರು ವರ್ಷಗಳ ಹೋರಾಟದ ನಂತರ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಿದೆ. ನಮ್ಮ ಮನೆಯ ಮಕ್ಕಳು ಛತ್ರಪತಿ ಶಿವಾಜಿ, ಶ್ರೀರಾಮನಂತಹ ಆದರ್ಶಗಳನ್ನು ಗುಣಗಳನ್ನು ಬೆಳೆಸಿಕೊಳ್ಳುವ ಮೂಲಕ ಪ್ರತಿ ಮನೆಯಯು ಹಿಂದೂ ಧರ್ಮ ರಕ್ಷಣೆ ಮಾಡುವಂತಹ ಅಯ್ಯೋಧ್ಯೆಯಾಗಬೇಕಾಗಿದೆ. ಜಗತ್ತನ್ನು ಬದಲಿಸುವ ಶಕ್ತಿ ಹೊಂದಿರುವ ತಾಯಂದಿರು ನಮ್ಮ ಹಿಂದೂ ಧರ್ಮದ ಹಾಗೂ ನಮ್ಮ ಪರಂಪರೆಯಿಂದ ಬಂದ ತತ್ವ, ಸಿದ್ದಾಂತ, ಆಚರಣೆಗಳನ್ನು ಚಾಚು ತಪ್ಪದೇ ಆಚರಿಸುವದರ ಜೊತೆಗೆ ಮಕ್ಕಳಿಗೆ ಉತ್ತಮ ನೈತಿಕ, ಧಾರ್ಮಿಕ ಶಿಕ್ಷಣ ಕೊಡಬೇಕು. ಈ ಮೂಲಕ ಪ್ರತಿ ಮನೆಯಲ್ಲಿ ಒಬ್ಬ ರಾಮನಂತಹ ಆದರ್ಶ ಪುರುಷರು, ಶಿವಾಜಿಯಂತ ಧರ್ಮ ರಕ್ಷಕರು ಉದಯಿಸಬೇಕಾಗಿದೆ ಎಂದರು.

ಹಿಂದೂ ಧರ್ಮಕ್ಕೆ ಗಂಡಾಂತರ ಬರುತ್ತಿರುವದು ಅನ್ಯ ಧರ್ಮಿಯರಿಂದ ಅಲ್ಲ, ಹಿಂದೂ ಧರ್ಮದಲ್ಲಿಯೇ ಹುಟ್ಟಿ ಹಿಂದೂ ಧರ್ಮದ ಅಸ್ತಿತ್ವದ ಕುರಿತು ಮಾತನಾಡು ಸೋಕಾಲ್ಡ್ ಬುದ್ದಿಜೀವಿಗಳಿಂದ. ಹಿಂದೂಗಳ ಮನೆಯ ಪ್ರತಿಯೊಬ್ಬ ಮಗು ಕೂಡಾ ಶ್ರೀರಾಮ, ಶ್ರೀಕೃಷ್ಣನ ವಂಶಪರಂಪರೆಯನ್ನು ತಿಳಿಸಿಕೊಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಹಿಂದೂ ಧರ್ಮ, ಹಿಂದೂ ರಾಷ್ಟ್ರವನ್ನು ಉಳಿಸುವ ಕೆಲಸ ಉಳಿಸುವ ಕೆಲಸವು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕು ಎಂದರು.

ಸಾನಿಧ್ಯ ವಹಿಸಿದ್ದ ಸಹಜಾನಂದ ಸ್ವಾಮಿಜಿ, ಬೆಂಗಳೂರಿನ ಅನ್ನದಾನಿ ಸ್ವಾಮಿಜಿ, ದೇವಿ ಪುರಾಣ ಪ್ರವಚನ ನೀಡಿದರು. ಪ್ರಸಾದ ದಾನಿಗಳಾದ ಶಂಕರ ಮತ್ತು ಸಂಜಯ ಅಂಬಿ ದಂಪತಿಗಳನ್ನು ಸನ್ಮಾನಿಸಲಾಯಿತು. ನಂತರ ಸರಿಗಮಪ ಖ್ಯಾತಿಯ ವಿಜಯಪುರದ ಸಾಕ್ಷಿ ಹಿರೇಮಠ ಅವರಿಂದ ಗಾಯನ ಕಾರ್ಯಕ್ರಮ ಜರುಗಿತು.

ಪುರಸಭೆ ಸದಸ್ಯರಾದ ರವಿ ಜವಳಗಿ, ಬಸವರಾಜ ಚಮಕೇರಿ, ಬನಶಂಕರಿದೇವಿ ದೇವಸ್ಥಾನದ ಹಿರಿಯರಾದ ಮಲ್ಲಪ್ಪ ಭಾವಿಕಟ್ಟಿ, ಲಕ್ಕಪ್ಪ ಚಮಕೇರಿ, ಶ್ರೀಶೈಲ ಬಾಡನವರ, ನಾರಾಯಣ ಕಿರಗಿ, ಸಿದ್ದಪ್ಪ ನಿಂಬರಗಿ, ಸಿದಗಿರಿ ಕಾಗಿ, ಬಿ.ಸಿ.ಪೂಜಾರಿ, ಗುರುಪಾದ ಅಂಬಿ, ಮಂಜುನಾಥ ಭಾವಿಕಟ್ಟಿ, ಸುರೇಶ ನಿಂಬರಗಿ, ಸಂಜು ಜಮಖಂಡಿ, ಪ್ರಕಾಶ ಬಾಡನವರ, ಸುನೀಲ ಜಮಖಂಡಿ, ಶಿವಾನಂದ ಕಿತ್ತೂರ, ಸಿದ್ದು ಧಡೂತಿ, ವಿನೋದ ಚಮಕೇರಿ, ಅಶೋಕ ಬಾಣಕಾರ ಸೇರಿದಂತೆ ಹಿಂದೂ ಸಂಘಟನೆಗಳ ಕಾರ್ಯಕರ್ತರು, ಮಹಿಳೆಯರು ಇದ್ದರು.

# ಪ್ರಾಣಿ–ಮಾನವ ಸಂಘರ್ಷ ತಪ್ಪಿಸಲು ಸರ್ಕಾರದಿಂದ ಸೂಕ್ತ ಕ್ರಮ

**ಧಾರವಾಡ :** ಅರಣ್ಯ ನಾಶದಿಂದ ಉಂಟಾಗುತ್ತಿರುವ ಪ್ರಾಣಿ ಮತ್ತು ಮಾನವ ಸಂಘರ್ಷವನ್ನು ತಪ್ಪಿಸಲು ತೊಂದರೆಯಲ್ಲಿರುವ ವನ್ಯಜೀವಿಗಳನ್ನು ಸಂರಕ್ಷಿಸಬೇಕು. ಮತ್ತು ಅವುಗಳ ಸ್ವಚ್ಛಂದ ಜೀವನವನ್ನು ಉಳಿಸಿ ಬೇಳಸಲು ಎಲ್ಲರೂ ಪ್ರಯತ್ನಿಸಬೇಕೆಂದು ಕರ್ನಾಟಕ ವನ್ಯಜೀವಿ ಮಂಡಳಿಯ ಸದಸ್ಯೆ ವೈಶಾಲಿ ಕುಲಕರ್ಣಿ ಅವರು ಹೇಳಿದರು.



ಅವರು ಅರಣ್ಯ ಇಲಾಖೆಯ ಧಾರವಾಡ ಪ್ರಾದೇಶಿಕ ವಿಭಾಗದ ಧಾರವಾಡ ವೃತ್ತದಿಂದ 70ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಆಯೋಜಿಸಿದ್ದ ಕಾಲ್ನಡಿಗೆ ಜಾಥಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ರಾಜ್ಯ ಸರ್ಕಾರವು ರಾಜ್ಯದ ವೈವಿಧ್ಯಮಯವಾದ ಅರಣ್ಯ, ಸಸ್ಯ ಸಂಪತ್ತು ಮತ್ತು ವನ್ಯ ಜೀವಿಗಳನ್ನು ಸಂರಕ್ಷಿಸಲು ಆಧ್ಯತೆ ನೀಡಿ ಹೊಸ ಕಾನೂನುಗಳನ್ನು ಜಾರಿಗೊಳಿಸುತ್ತಿದೆ. ಧಾರವಾಡ ಜಿಲ್ಲೆಯು ಅರೆ ಮಲೆನಾಡು ಆಗಿರುವದರಿಂದ ಬೆಳಗಾವಿ ಹಾಗೂ ಉತ್ತರಕನ್ನಡ ಜಿಲ್ಲೆಗಳ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಯ ಭೂಪ್ರದೇಶವನ್ನು ಹೆಚ್ಚು ಅರಣ್ಯೀಕರಣಗೊಳಿಸಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದು ಅವರು ಹೇಳಿದರು.

ಅರಣ್ಯ ನಾಶದಿಂದಾಗಿ ಪ್ರಾಣಿಗಳು ನಾಡಿಗೆ ಆಗಮಿಸುತ್ತಿದ್ದು, ಇದರಿಂದ ಮಾನವ ಹಾಗೂ ಪ್ರಾಣಿ ಸಂಘರ್ಷವು ದಿನದಿಂದ ದಿನಕ್ಕೆ ಸಾಮಾನ್ಯವಾಗುತ್ತಿದೆ. ಇದನ್ನು ತಪ್ಪಿಸಲು ಮತ್ತು ಅರಣ್ಯ ನಾಶವನ್ನು ತಡೆಗಟ್ಟಲು ಸರ್ಕಾರವು ಅರಣ್ಯ ಒತ್ತುವರಿ ತೆರವುಗೊಳಿಸಲು ಕಠಿಣ ಕ್ರಮಗಳನ್ನು ಕೈಗೊಂಡಿದೆ ಎಂದು ಅವರು ಹೇಳಿದರು.

ಕಾಲ್ನಡಿಗೆ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮಾತನಾಡಿ, ಸಾಮಾನ್ಯವಾಗಿ ನಮ್ಮ ಜಿಲ್ಲೆಯ ಭೂಪ್ರದೇಶವನ್ನು ನೋಡಿ–ದಾಗ ಶೇ. 33 ರಷ್ಟು ಅರಣ್ಯ ಪ್ರದೇಶ ಇರಬೇಕು. ಆದರೆ ಈಗ ಜಿಲ್ಲೆಯಲ್ಲಿ ಶೇ. 8.5 ರಷ್ಟು ಅರಣ್ಯವಿದೆ. ಜಿಲ್ಲೆಯಲ್ಲಿ ಕನಿಷ್ಠ ಶೇ. 20 ರಷ್ಟು ಭೂಪ್ರದೇಶವನ್ನು ಅರಣ್ಯೀಕರಣಗೊಳಿಸಲು ಅರಣ್ಯ ಇಲಾಖೆಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶವನ್ನು ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಮಹಾತ್ಮ ಗಾಂಧೀ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಮೂಲಕ ಗ್ರಾಮೀಣ ಭಾಗದಲ್ಲಿ ರಸ್ತೆಗಳ ಎರಡು ಬದಿಯಲ್ಲಿ, ರೈತರ ಹೊಲ–ಬದುಗಳಲ್ಲಿ ಮತ್ತು ಕೆರೆ, ಸರ್ಕಾರಿ ಭೂಮಿ, ಹಳ್ಳದ ಮಗ್ಗಲುಗಳಲ್ಲಿ ವಿವಿಧ ರೀತಿಯ ಮರಗಳ ಸಸಿಗಳನ್ನು ನೆಡಲಾಗುತ್ತಿದೆ. ಸಂಘ, ಸಂಸ್ಥೆ ಹಾಗೂ ಸಾರ್ವಜನಿಕರ ಸಹಕಾರದಲ್ಲಿ ಹೆಚ್ಚು ಅರಣ್ಯ ಬೆಳಸಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಕಾಲ್ನಡಿಗೆ ಜಾಥಾ ಕಾರ್ಯಕ್ರಮದಲ್ಲಿ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಶಿವಕುಮಾರ, ಕಾರ್ಯಯೋಜನೆ ವಿಭಾಗದ ಡಿಎಫ್‌ಓ ಪಿ. ಎಸ್. ವರೂರ, ವಲಯ ಅರಣ್ಯ ಅಧಿಕಾರಿ ಪ್ರದೀಪ ಎಸ್. ಪವಾರ, ಡಿಆರ್‌ಎಫ್‌ಓ ಯಲ್ಲಾನಾಯಕ ಹಮಾನಿ ಸೇರಿದಂತೆ ಅರಣ್ಯ ಇಲಾಖೆಯ ಧಾರವಾಡ ವೃತ್ತದ ವಿವಿಧ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಪೂರ್ಣಾ, ಎಂಪವರ್ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಅಚ್ಚಳಿಯದೇ ಉಳಿಯುವ ಹೆಸರು ಮಹಾತ್ಮಾ ಗಾಂಧೀಜಿ



**ಧಾರವಾಡ :** ಸತ್ತೂರಿನಲ್ಲಿ ಶ್ರೀ ಬಸವೇಶ್ವರ ರೂರಲ್ ಎಜುಕೇಶನ್ ಆಂಡ್ ಡೆವಲಪ್ಮೆಂಟ್ ಟ್ರಸ್ಟ್ ನಲ್ಲಿ 155 ನೇ ಮಹಾತ್ಮ ಗಾಂಧೀಜಿಯವರ ಮತ್ತು 120 ನೇ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತೋತ್ಸವ ಕಾರ್ಯಕ್ರಮ ನಡೆಯಿತು.

ಟ್ರಸ್ಟ ಅಧ್ಯಕ್ಷ ಡಾ. ಶರಣಪ್ಪ ಎಂ. ಕೊಟಗಿಯವರು ಮಾತನಾಡಿ, ಭಾರತೀಯರ ಮನಸ್ಸಿನಲ್ಲಿ ಅಚ್ಚಳಿಯದೇ ಸದಾ ಶಾಶ್ವತವಾಗಿರುವ ಹೆಸರು ಅಂದರೆ ಅದು ಎಂದೆಂದಿಗೂ ಮಹತ್ಮಾರಾಗಿರುವ ಗಾಂಧೀಜಿ. ಗಾಂಧಿಯವರ ಬದುಕೊಂದು ಶಾಂತಿ– ಹೋರಾಟಗಳ ಮಹಾಗಾಥೆ. ಸತ್ಯಕ್ಕಾಗಿ ನಿರಂತರ ಅನ್ವೇಷಣೆ, ಪ್ರತಿಯೊಬ್ಬರು ಸಮಾನರು ಎಂಬ ನೆಲೆಯಲ್ಲಿ ವಸಾಹತುಶಾಹಿಯ ಎದುರು ಸ್ವಾತಂತ್ರ್ಯಕ್ಕಾಗಿ ದಿಟ್ಟ ಹೋರಾಟ ಇವುಗಳೆಲ್ಲ ರಾಷ್ಟ್ರಪಿತನನ್ನು ಜಾಗತಿಕ ನಾಯಕರಲ್ಲಿ ಮೊದಲಿನ ಸ್ಥಾನಕ್ಕೇರಿಸಿದೆ. ದಂಡಿಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿಯಂತಹ ಅನೇಕ ಹೋರಾಟಗಳ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಯವರ ಹುಟ್ಟುಹಬ್ಬವನ್ನು ನಾಡಿನಾದ್ಯಂತ ಪ್ರತಿವರ್ಷ ಅಕ್ಟೋಬರ್ 2ರಂದು ಆಚರಿಸಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತವಿಕವಾಗಿ ಬಿ. ಇಡಿ ಕಾಲೇಜಿನ ಪ್ರಾಚಾರ್ಯರಾದ ಡಾ ಮಹಾಂತೇಶ್ ಹಿರೇಮಠ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಟ್ರಸ್ಟಿಗಳಾದ ನಾಗರಾಜ ಎಸ್ ಕೊಟಗಿ, ಫಾರ್ಮಸಿ ಕಾಲೇಜಿನ ಪ್ರಾಚಾರ್ಯರಾದ ನವೀನ್ ಕರೆರ್, ಬಿ. ಇಡಿ ಕಾಲೇಜಿನ ಪ್ರಧ್ಯಾಪಕರಾದ ಎಲ್. ವಾಯ್. ಬುಡ್ಡನವರ, ವಾಗಿಶ ಹಿರೇಮಠ, ಡಾ. ವಾಸಿಮ್, ಪವನ್ ಮುಂತಾದವರು ಮತ್ತು ಬೋಧಕೇತರ ಸಿಬ್ಬಂದಿಯವರು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ರೂರಲ್ ಬಿ.ಇಡಿ ಕಾಲೇಜಿನ ಪ್ರಾಧ್ಯಾಪಕರಾದ ರಂಗಪ್ಪ ದಾಸರ ನೆರವೇರಿಸಿದರು.

# ಹುಬ್ಬಳ್ಳಿ: ಸ್ವಯಂಪ್ರೇರಿತ ಸ್ವಚ್ಛತಾ ಅಭಿಯಾನ

**ಹುಬ್ಬಳ್ಳಿ :** ಸ್ವಚ್ಛತಾ ಅಭಿಯಾನದ ಅಂಗವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆಯ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿಗಳಿಂದ ಮಂಗಳವಾರ ಗೋಕುಲ ರಸ್ತೆಯಲ್ಲಿರುವ ಬಸ್ ನಿಲ್ದಾಣದಲ್ಲಿ ಸ್ವಯಂಪ್ರೇರಿತ ಸ್ವಚ್ಛತಾ ಕಾರ್ಯಕ್ರಮ ಕೈಗೊಳ್ಳಲಾಯಿತು.



ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹುಬ್ಬಳ್ಳಿ ಗ್ರಾಮಾಂತರ ವಿಭಾಗದ ಎಲ್ಲಾ 5 ಡಿಪೋಗಳು ಹಾಗೂ ಬಸ್ ನಿಲ್ದಾಣಗಳಲ್ಲಿ ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರವರೆಗೆ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಅದರ ಭಾಗವಾಗಿ ಗಾಂಧೀ ಜಯಂತಿಯ ಮುನ್ನಾ ದಿನವಾದ ಅಕ್ಟೋಬರ್ 1ರಂದು ಮಂಗಳವಾರ ಗೋಕುಲ ರಸ್ತೆಯಲ್ಲಿರುವ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಕಾರ್ಯಕ್ರಮ ಕೈಗೊಳ್ಳಲಾಯಿತು

ನಿತ್ಯ ಬಸ್ಸುಗಳ ನಿರ್ವಹಣೆ, ದುರಸ್ತಿ ಮಾಡುವ ವಿಭಾಗೀಯ ಕಾರ್ಯಗಾರದ ತಾಂತ್ರಿಕ ಸಿಬ್ಬಂದಿಗಳು, ಘಟಕಗಳ ಚಾಲಕರು, ನಿರ್ವಾಹಕರು, ಮೇಲ್ವಿಚಾರಕರು ಹಾಗೂ ಅಧಿಕಾರಿಗಳು ಸೇರಿದಂತೆ ಸಾರಿಗೆ ಸಿಬ್ಬಂದಿಗಳು ಸ್ವಯಂ ಪ್ರೇರಿತರಾಗಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಆ ಮೂಲಕ ಸಾರ್ವಜನಿಕರಿಗೆ ಸ್ವಚ್ಛತೆ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು. ವಿಭಾಗೀಯ ನಿಯಂತ್ರಣಧಿಕಾರಿ ಎಚ್. ರಾಮನಗೌಡರ ಮಾತನಾಡಿ, ಬಸ್ ಮತ್ತು ನಿಲ್ದಾಣದಲ್ಲಿ ಸ್ವಚ್ಛತೆ ಕಾಪಾಡಲು ನಿರಂತರವಾಗಿ ಕ್ರಮ ವಹಿಸಲಾಗುತ್ತದೆ.ಇದಕ್ಕೆ ಸಾರ್ವಜನಿಕರ ಸಹಭಾಗಿತ್ವ ಅತ್ಯಗತ್ಯ. ಬಸ್ ನಿಲ್ದಾಣದಲ್ಲಿ ಧೂಮಪಾನ, ಗುಟಕಾ–ತಂಬಾಕು ಸೇವನೆ, ಉಗುಳುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸುವವರಿಗೆ ಸ್ಥಳದಲ್ಲಿಯೇ ದಂಡ ವಿಧಿಸಲಾಗುತ್ತದೆ. ತಿಂಡಿ, ತಿನಿಸುಗಳ ಕವರ್ ಗಳು, ಹಾಳೆ, ನೀರಿನ ಬಾಟಲ್ ಗಳನ್ನು ಎಲ್ಲೆಂದರಲ್ಲಿ ಎಸೆಯದೆ ನಿಗದಿತ ಸ್ಥಳಗಳಲ್ಲಿ ಕಸದ ಡಬ್ಬಿಗಳಲ್ಲಿ ಹಾಕಬೇಕು. ಸ್ವಚ್ವತೆ ಕಾಪಾಡಲು ಸಾರ್ವಜನಿಕರು ಸಂಸ್ಥೆಯೊಂದಿಗೆ ಸಹಕರಿಸುವಂತೆ ಅವರು ಮನವಿ ಮಾಡಿದ್ದಾರೆ.

ಅಧಿಕಾರಿಗಳಾದ ಪಿ.ವೈ.ಗಡಾದ, ರಮೇಶ ಕರಿಂಡಿ, ಸದಾನಂದ ಒಡೆಯರ, ಸುನಿಲ್ ವಾಡೇಕರ, ಶಿವಕುಮಾರ್,ಐ.ಜಿ. ಮಾಗಾಮಿ, ಡಿಪೋ ಮ್ಯಾನೇಜರ್ ಗಳಾದ ಟಿ.ಹೆಚ್. ಮುನ್ನಾ ಸಾಬ್, ರೋಹಿಣಿ ಬೇವಿನಕಟ್ಟಿ, ಬಿ.ಕೆ. ನಾಗರಾಜ, ನಿಲ್ದಾಣಾಧಿಕಾರಿ ವಿ.ಎಸ್.ಹಂಚಾಟೆ ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

# ನಗರದಲ್ಲಿ ದರೋಡೆಕೋರರ ಗ್ಯಾಂಗ್ ಬಂಧನ

**ಹುಬ್ಬಳ್ಳಿ :** ನಗರದ ಹೊರವಲಯದ ಗದಗ ರಸ್ತೆಯ ವರ್ತುಲ ರಸ್ತೆಯಲ್ಲಿ ಸಂಚರಿಸುವ ವಾಹನಗಳನ್ನು ಅಡ್ಡಗಟ್ಟಿ ದರೋಡೆ ಮಾಡುತ್ತಿದ್ದ ದರೋಡೆಕೋರರ ಗ್ಯಾಂಗ್ ಅನ್ನು ಬೆಂಡಿಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸುದ್ದಿಗಾರರಿಗೆ ಈ ವಿಷಯವನ್ನು ಹು–ಧಾ ಪೊಲೀಸ್ ಆಯುಕ್ತರಾದ ಎನ್. ಶಶಿಕುಮಾರ ತಿಳಿಸಿದರು.

ಗಂಗಾಧರನಗರದ ಭೀಮರಾವ್ ತಾವರಗೊಪ್ಪ, ರವಿ ಗೋಕಾಕ್, ಕೆ.ಬಿ. ನಗರದ ದೀಪಕ ನರಗುಂದ, ಶ್ರೀನಿವಾಸ ವೀರಾಪುರ, ಸೋನಿಯಾಗಾಂಧಿ ನಗರದ ಶಶಿಕುಮಾರ್ ಸಾತಪತಿ, ಗೋಪನಕೊಪ್ಪದ ನಾಗರಾಜ ಬಳ್ಳಾರಿ ಬಂಧಿತ ಆರೋಪಿಗಳು. ಅವರಿಂದ ಪೊಲೀಸರು 4,100 ನಗದು ಸೇರಿದಂತೆ ಕೃತ್ಯಕ್ಕೆ ಬಳಸಿದ್ದ ಆಟೊ, ಎರಡು ದ್ವಿಚಕ್ರ ವಾಹನ, ಚಾಕು ಹಾಗೂ ಖಾರದ ಪುಡಿ ಪ್ಯಾಕೆಟ್ ವಶಪಡಿಸಿಕೊಂಡಿದ್ದಾರೆ. ಹೊರವಲಯದ ವರ್ತುಲ ರಸ್ತೆಯಲ್ಲಿ ರಾತ್ರಿ ವೇಳೆ ಸಂಚರಿಸುತ್ತಿದ್ದ ಬೈಕ್ ಸವಾರರನ್ನು ಹಾಗೂ ಲಾರಿಗಳನ್ನು ಆರೋಪಿಗಳು ಅಡ್ಡಗಟ್ಟಿ ಬೆದರಿಸುತ್ತಿದ್ದರು. ಕಣ್ಣಿಗೆ ಖಾರದ ಪುಡಿ ಎರಚಿ, ಚಾಕುವಿನಿಂದ ಹಲ್ಲೆ ಮಾಡಿ ಹಣ, ಚಿನ್ನಾಭರಣ ಸೇರಿದಂತೆ ಅತ್ಯಮೂಲ್ಯ ವಸ್ತುಗಳನ್ನು ದೋಚುತ್ತಿದ್ದರು. ಬೆಂಡಿಗೇರಿ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು.

ಆರೋಪಿಗಳ ಪತ್ತೆಗೆ ಇನ್‌ಸ್ಪೆಕ್ಟರ್ ಎಸ್. ಆರ್. ನಾಯಕ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು.

ಪಿಐ ಎಸ್.ಆರ್. ನಾಯಕ್, ಪಿಎಸ್‌ಐ ರವಿ ವಡ್ಡರ, ಎಎಸ್‌ಐ ಟಿ.ಎನ್. ಸವದತ್ತಿ, ಸಿಬ್ಬಂದಿಯಾದ ಪಿ.ಜಿ. ಪುರಾಣಿಕಮಠ, ಎನ್.ಐ. ನಿಲಗಾರ್, ಪಿ.ಎಫ್.ಅಂಬಿಗೇರ್, ಆರ್.ಎಸ್.ಹರ್ಕಿ, ರಮೇಶ ಹಿತ್ತಲಮನಿ, ಹನುಮಂತ ಕರಗಾವಿ, ಸೋಮು ಮೇಟಿ, ಬಸವರಾಜ ಗಳಗಿ, ಗುಡ್ಡಪ್ಪ ಒಗ್ಗಣ್ಣವರ, ಬಸು ಗೌಡರ, ಹನುಮಂತ ಆಲೂರ ಕಾರ್ಯಾಚ 'ರಣೆಯಲ್ಲಿಪಾಲ್ಗೊಂಡಿದ್ದರು.

# ನವರಾತ್ರೋತ್ಸವ: 4 ಸ್ಥಳಗಳಲ್ಲಿ ಶ್ರೀ ದೇವಿಮೂರ್ತಿ ಪ್ರತಿಷ್ಠಾಪನೆ

**ತಾಳಿಕೋಟೆ :** ಪ್ರತಿ ವರ್ಷದಂತೆ ಈ ಸಲವೂ ನವರಾತ್ರೋತ್ಸವ ಅಂಗವಾಗಿ ಪಟ್ಟಣದ 4 ಸ್ಥಳಗಳಲ್ಲಿ ಶ್ರೀ ನಾಡದೇವಿ ಮೂರ್ತಿಗಳನ್ನು ಗುರುವಾರರಂದು ಭಕ್ತಿ ಭಾವದೊಂದಿಗೆ ಪ್ರತಿಷ್ಠಾಪಿಸಲಾಯಿತು.



ಪಟ್ಟಣದ ರಜಪೂತ ಸಮಾಜ ಬಾಂದವರ ವತಿಯಿಂದ ರಜಪೂತ ಬಡಾವಣೆಯಲ್ಲಿ, ನವರಾತ್ರೋತ್ಸವ ಸಮಿತಿಯವರ ವತಿಯಿಂದ ಕಾಮನಕಟ್ಟಿ ಬಡಾವಣೆಯಲ್ಲಿ, ದಸರಾ ಉತ್ಸವ ಕಮಿಟಿಯವರ ವತಿಯಿಂದ ಶ್ರೀ ವಿಠ್ಠಲ ಮಂದಿರದಲ್ಲಿ, ಹಾಗೂ ಶ್ರೀ ದೇವಿ ಮಾತೃಮಂಡಳಿ ಮತ್ತು ಹಿಂದೂ ಮಹಾಗಣಪತಿ ಮಹಾ ಮಂಡಳಿಯವರ ನೇತೃತ್ವದಲ್ಲಿ ತಿಲಕ ರಸ್ತೆ ಬಡಾವಣೆಯಲ್ಲಿ ಸಾಯಂಕಾಲ ಪ್ರತಿಷ್ಠಾಪಿಸಲಾಯಿತು. ನಂತರ ಅರ್ಚಕರುಗಳಿಂದ ಶ್ರೀ ದೇವಿಗೆ ಮಹಾ ಪೂಜೆ, ಘಟ ಸ್ಥಾಪನೆ ಕಾರ್ಯಕ್ರಮಗಳು ಜರುಗಿದವು.

9 ದಿನಗಳ ಕಾಲ ನಡೆಯುವ ಈ ದೇವಿಯ ನವರಾತ್ರೋತ್ಸವ ಅಂಗವಾಗಿ ಶ್ರೀ ದೇವಿಯ ವಿವಿಧ ಪೂಜಾ ಕಾರ್ಯಕ್ರಮಗಳು ಜರುಗುವಲ್ಲದೇ ಮಹಿಳೆಯರಿಗಾಗಿ ಮನರಂಜನೆ ಅಲ್ಲದೇ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ದಾ ಕಾರ್ಯಕ್ರಮಗಳು ಜರುಗಲಿವೆ.

ಈ ಉತ್ಸವ ಅಂಗವಾಗಿ ಪಟ್ಟಣದ ಕ್ಷತ್ರೀಯ ಮರಾಠಾ ಸಮಾಜದ ಶ್ರೀ ಶಿವಭವಾನಿ ಮಂದಿರದಲ್ಲಿ ಹಾಗೂ ಶ್ರೀ ಖಾಸ್ಗತೇಶ್ವರ ನಗರದ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಶ್ರೀ ದೇವಿಯ ಮಹಾ ಪುರಾಣ ಕಾರ್ಯಕ್ರಮವು ಜರುಗಲಿದೆ ಅಲ್ಲದೇ ರಜಪೂತ ಸಮಾಜದ ಶ್ರೀ ಅಂಬಾಭವಾನಿ ದೇವಸ್ಥಾನ, ಭಾವಸಾರ ಕ್ಷತ್ರೀಯ ಸಮಾಜದ ಶ್ರೀ ಅಂಬಾಭವಾನಿ ಮಂದಿರ, ಗೋಂದಳಿ ಸಮಾಜದ ಶ್ರೀ ಅಂಬಾಭವಾನಿ ಮಂದಿರದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಲಿವೆ.

# ಜಿಲ್ಲಾಮಟ್ಟಕ್ಕೆ ಆಯ್ಕೆಯಾದ ಸೇಂಟ್ ಅನ್ನಿಯಸ್ ಲೈನ್ಸ್ ವಿದ್ಯಾರ್ಥಿಗಳು



**ಬಾಗಲಕೋಟ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಜರುಗಿದ 2024–25 ನೇ ಸಾಲಿನ ಜಿಲ್ಲಾಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ಕು. ಸಾತ್ವಿಕ ಜಿ. ತೆಗ್ಗಿ ಉದ್ದಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದು, 2024–25 ನೇ ಸಾಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ದಸರಾ ಕ್ರೀಡಾಕೂಟದಲ್ಲಿ ಡಿವ್ಹಿಜನಲ್ ಲೇವಲ್ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಕು.ರಿತಿಕಾ ಮತ್ತು ಕು.ಪ್ರಾಂಜಲ ಪವಾರ ಪ್ರಥಮ ಸ್ಥಾನ ಪಡೆದು ಬೆಳಗಾವಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸೇಂಟ್ ಅನ್ನಿಯಸ್ ಲೈನ್ಸ್ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಸಿಸ್ಟರ್ ಅನ್ಸೆಲ್, ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ರವಿ ಸಂಗಮ, ಮಂಜುನಾಥ,

ವರ್ಗದ ಗುರುಗಳು, ಬೋಧಕ–ಬೋಧಕ ಸಿಬ್ಬಂದಿ, ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಕಗ್ಗೋಡದಲ್ಲಿ ಸಜ್ಜನ ಕಲ್ಯಾಣ ಮಂಟಪ ಹಾಗೂ ಗೋ ಆಧಾರಿತ ಕೃಷಿ ತರಬೇತಿ ಕೇಂದ್ರ ಉದ್ಘಾಟನೆ

**ವಿಜಯಪುರ :** ತಾಲ್ಲೂಕಿನ ಕಗ್ಗೋಡದಲ್ಲಿರುವ ಶ್ರೀ ರಾಮನಗೌಡ ಪಾಟೀಲ (ಯತ್ನಾಳ) ಗೋ ರಕ್ಷಾ ಕೇಂದ್ರವು ಗುರುವಾರ ವಿಶಿಷ್ಟ ಹಾಗೂ ವಿಶೇಷ ಕಾರ್ಯಕ್ರಮಕ್ಕೆ ಸಾಕ್ಷಿಯಾಯಿತು.



ಸಾರ್ವಜನಿಕರಿಗೆ ಮದುವೆ ಮತ್ತಿತರೆ ಶುಭ ಕಾರ್ಯಗಳ ಆಯೋಜನೆಗೆ ಹಾಗೂ ಗೋವು ಉತ್ಪನ್ನಗಳ ಬಗ್ಗೆ ತರಬೇತಿ ನೀಡಲು ಅನುಕೂಲವಾಗಲೆಂದು ಗೋ ರಕ್ಷಾ ಕೇಂದ್ರದ ಆವರಣದಲ್ಲಿ ನೂತನವಾಗಿ ನಿರ್ಮಾಣ ಮಾಡಲಾದ ಮಾತೋಶ್ರೀ ಬಂಗಾರಮ್ಮ ಬಸಪ್ಪ ಸಜ್ಜನ ಕಲ್ಯಾಣ ಮಂಟಪ ಹಾಗೂ ಗೋ ಆಧಾರಿತ ಕೃಷಿ ತರಬೇತಿ ಕೇಂದ್ರವನ್ನು ಸಿಂಗಾರಗೊಂಡ ಐದು ಗೋಮಾತೆಗಳಿಗೆ ಪೂಜೆ ಸಲ್ಲಿಸಿ,

ಒಳಪ್ರವೇಶ ಮಾಡಿಸುವ ಮೂಲಕ ಸಿದ್ದೇಶ್ವರ ಸಂಸ್ಥೆ ಅಧ್ಯಕ್ಷರು ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಲೋಕಾರ್ಪಣೆಗೊಳಿಸಿದರು.

ನಂತರ ಗೋಮಾತೆಯ ಕಲ್ಯಾಣ ಮಹೋತ್ಸವ (ಆಕಳು ಮತ್ತು ಹೋರಿ ಮದುವೆ) ನೆರವೇರಿಸಿ, ಕಲ್ಯಾಣ ಕಾರ್ಯವಾದ ಮದುವೆ ಮತ್ತಿತರೆ ಶುಭ ಕಾಂರ್ರ್ಕ್ರವ್ಂಗಳ್ನ್ನು ಆಯೋಜಿಸಲು ವಿಶೇಷವಾಗಿ ಚಾಲನೆ ನೀಡಲಾಯಿತು.

ಇದಕ್ಕೂ ಮೊದಲು ಕಲ್ಯಾಣ ಮಂಟಪದಲ್ಲಿ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು.

ಇದೇ ವೇಳೆ ಸಿದ್ದೇಶ್ವರ ಸಂಸ್ಥೆ ಅಡಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಯಾಗಳನ್ನು ಗೌರವಿಸಲಾಯಿತು. ನಂತರ ಸಾರ್ವಜನಿಕರ ಅಹವಾಲು ಆಲಿಸಿದರು.

ಶ್ರೀ ಸಿದ್ದೇಶ್ವರ ಸಂಸ್ಥೆಯ ಚೇರಮನ್ ಬಸಯ್ಯ ಹಿರೇಮಠ, ಗೌರವ ಕಾರ್ಯದರ್ಶಿ ಸದಾನಂದ ದೇಸಾಯಿ, ಬಸವರಾಜ ಸುಗೂರ, ಜಂಟಿ ಕಾರ್ಯದರ್ಶಿ ಮಲ್ಲಿಕಾರ್ಜುನ ಸಜ್ಜನ, ಕೋಶಾಧ್ಯಕ್ಷ ಶಿವಾನಂದ ನೀಲಾ, ನಿರ್ದೇಶಕರಾದ ನಿಂಗೊಂಡಪ್ಪ ಗೋಲಾಯಿ, ವಿಜಯಕುಮಾರ ಡೋಣಿ, ಬಸವರಾಜ ಗಣಿ, ಸಂಗನಗೌಡ ನಾಡಗೌಡ, ಸುಧೀರ ಚಿಂಚಲಿ, ನಾಗಪ್ಪ ಗುಗ್ಗರಿ, ಸಾಯಿಬಣ್ಣ ಭೋವಿ, ಮಲಕಪ್ಪ ಗಾಣಿಗೇರ, ರಮೇಶ ಹಳ್ಳದ, ಮಲ್ಲಿಕಾರ್ಜುನ ಹಕ್ಕಾಪಕ್ಕಿ, ಸಿದ್ದಸಿರಿ ಸೌಹಾರ್ದ ಸಹಕಾರಿ ಸಂಘದ ನಿರ್ದೇಶಕರಾದ ಜಗದೀಶ ಕ್ಷತ್ರಿ, ಪ್ರಭುಗೌಡ ದೇಸಾಯಿ, ಶೈಲಜಾ ಪಾಟೀಲ, ಸೀಮಾ ಕೋರೆ, ರಮೇಶ ಬಿರಾದಾರ, ಗಣಪತಿ ಜಾಧವ, ವ್ಯವಸ್ಥಾಪಕ ನಿರ್ದೇಶಕರಾದ ಜ್ಯೋತಿಬಾ ಖಂಡಾಗಳೆ, ಜಂಟಿ ವ್ಯವಸ್ಥಾಪಕ ನಿರ್ದೇಶಕ ರಾಘವ್ ಅಣ್ಣಿಗೇರಿ ಸೇರಿದಂತೆ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ಹಿತೈಷಿಗಳು ಉಪಸ್ಥಿತರಿದ್ದರು.

## ಸಂಚಾರಿ ಕುರಿಗಾಹಿಗಳಿಗೆ ಗುರುತಿನ ಚೀಟಿ ವಿತರಣೆ: ಅರ್ಜಿ ಆಹ್ವಾನ

**ಕೊಪ್ಪಳ :** ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ 2024–25ನೇ ಸಾಲಿನಲ್ಲಿ ಸಂಚಾರಿ ಕುರಿಗಾಹಿಗಳಿಗೆ ಗುರುತಿನ ಚೀಟಿ ನೀಡಲು ಆಸಕ್ತ ಕುರಿಗಾಹಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಸಂಚಾರಿ ಕುರಿಗಾಹಿಗಳು ನಿಗದಿತ ಅರ್ಜಿ ನಮೂನೆಗಳನ್ನು ಸ್ಥಳೀಯ ಪಶು ವೈದ್ಯಾಧಿಕಾರಿಗಳು, ತಾಲ್ಲೂಕು ಮುಖ್ಯ ಪಶು ವೈದ್ಯಾಧಿಕಾರಿಗಳ ಕಚೇರಿ ಹಾಗೂ ನಿಗಮದಲ್ಲಿ ನೊಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಿಂದ ಅರ್ಜಿಗಳನ್ನು ಪಡೆದುಕೊಂಡು ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ ಅಕ್ಟೋಬರ್ 25ರ ರೊಳಗಾಗಿ ಆಯಾ ತಾಲ್ಲೂಕಿನ ಮುಖ್ಯ ಪಶು ವೈದ್ಯಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅನುಷ್ಠಾನಾಧಿಕಾರಿಗಳು ಸಹಾಯಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಕೊಪ್ಪಳ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಶಿಕ್ಷಕ ಬಸವರಾಜಗೆ ಶಿಕ್ಷಣ ರತ್ನ ರಾಜ್ಯ ಪ್ರಶಸ್ತಿ

**ಬೀಳಗಿ :** ಕುಂದರಗಿ ಶ್ರೀ ರಾಮಲಿಂಗೇಶ್ವರ ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕ ಬಸವರಾಜ ದಾವಣಗೆರೆ ಅವರಿಗೆ ಶಿಕ್ಷಣ ರತ್ನ "ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.ಶ್ರೀ ಗುರು ಸೋಮಲಿಂಗೇಶ್ವರ ಸಾಂಸ್ಕೃತಿಕ ಕಲಾ ಸಂಘ ಕಲಘಟಗಿಯಲ್ಲಿ ಜರುಗಿದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಜಯಂತಿ ಅಂಗವಾಗಿ ಆಯೋಜಿಸಿದ ಸಾಧಕರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು. ರಂಗಾಯಣದ ನಿರ್ದೇಶಕರು ಹಾಗೂ ಖ್ಯಾತ ರಂಗಭೂಮಿ ಕಲಾವಿದರಾದ ಡಾ.ರಾಜು ತಾಳಿಕೋಟಿ,ಧಾರವಾಡ ಜಿಲ್ಲಾ ಶಾಲಾ ಶಿಕ್ಷಣ ಉಪನಿರ್ದೇಶಕ ರಾದ ಎಸ್. ಎಸ್ ಕೆಳದಿಮಠ,ಕ.ಸಾ.ಪ ಜಿಲ್ಲಾಧ್ಯಕ್ಷರಾದ ಲಿಂಗರಾಜ ಅಂಗಡಿ ಸೇರಿ ಅನೇಕರು ಉಪಸ್ಥಿತರಿದ್ದರು.



